ಡಾ: ಕೆ. ಅನ್ನದಾನಿ : ವಾಟಾಳ್ ನಾಗರಾಜ್‌ರವರು ಪದೇ ಪದೇ ಅದೇ ವಿಷಯವನ್ನು ಚರ್ಚೆ ಮಾಡುವುದಕ್ಕೆ ನೀವೇಕೆ ಅವಕಾಶ ಮಾಡಿಕೊಡುತ್ತೀರಿ? ನಾವು ಮಾತನಾಡಿದಾಗ ಮಾತ್ರ ಕುಳಿತುಕೊಳ್ಳಿ ಎನ್ನುತ್ತೀರಿ.

ಉಪಾಧ್ಯಕ್ಷರು: ಈಗ ನೀವು ಮಾತನಾಡಬೇಕಾ, ಅವರಿಗೆ ಮಾತನಾಡುವುದಕ್ಕೆ ಹೇಳಬೇಕಾ?

ಡಾ: ಕೆ. ಅನ್ನದಾನಿ: ಈ ತಾರತಮ್ಯ ಸರಿಯಲ್ಲ.

ಶ್ರೀ ಗೋವಿಂದಪ್ಪ ಎಂ. ಕಾರಜೋಳ : ಇದೇ ನಿದು ಭಾಷೆ, ಅವರಿಗೆ ನಾನು ಮಾತನಾಡಿದ್ದು ಅರ್ಥವಾಗಲಿಲ್ಲ, ಅವರೇನು ಮಾತನಾಡಿದರು ಎನ್ನುವುದನ್ನು ಉಪಾಧ್ಯಕ್ಷರೇ ದಯಮಾಡಿ ತಾವೇ ಹೇಳಿ.

ಉಪಾಧ್ಯಕ್ಷರು : ಅರ್ಥವಾಯಿತು ಕುಳಿತುಕೊಳ್ಳಿ, ನಮ್ಮ ಭಾಷೆಗಳನ್ನು ಉಪಯೋಗಿಸಬೇಕಾದರೆ ನಮ್ಮಲ್ಲಿ ಸಾಕಷ್ಟು ಇದ್ದಾವೆ, ಅವು ಎಲ್ಲರಿಗೂ ಅನ್ವಯಿಸುತ್ತದೆ, ಸದನದಲ್ಲಿರುವ ಒಬ್ಬರಿಗೆ ಅದು ಅನ್ವಯಿಸುವುದಿಲ್ಲ, ಅದು ಆಗಿಹೋಯಿತು, ಅದನ್ನು ಬಿಟ್ಟು ಬಿಡಿ, ಮಾನ್ಯ ಕೆ.ಟಿ. ರಾಮಸ್ವಾಮಿಯವರು ಮಾತನಾಡಿ.

10. ನಿಯಮ 69ರ ಮೇರೆಗೆ ಅಲ್ಪಾವಧಿ ಚರ್ಚೆ

ವಿಷಯ: ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಅಕ್ರಮ ವ್ಯವಹಾರಗಳ ಬಗ್ಗೆ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು, ಅಕ್ರಮ ವ್ಯವಹಾರಗಳಿಂದ ನಷ್ಟ ಅನುಭವಿಸುತ್ತಿದ್ದಾವೆ. ಇದರಿಂದ ಈ ರಾಜ್ಯದ ರೈತರು ಹಾಗೂ ಕಾರ್ಮಿಕರಿಗೆ, ತುಂಬಾ ತೊಂದರೆಯಾಗುತ್ತಿದೆ, ಆ ಬಗ್ಗೆ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಸಹಕಾರಿ ಆಂದೋಲನ ಪ್ರಾರಂಭವಾಗಿ ನೂರು ವರ್ಷವಾಯಿತು. ಆದರೆ ಈ ನೂರು ವರ್ಷದಲ್ಲಿ ಸಹಕಾರಿ ರಂಗದಲ್ಲಿ ನಾವು ಸಾಧನೆ ಮಾಡಿದ್ದಕ್ಕಿಂತಲೂ ಕೂಡ ಅವಸಾನದ ಕಡೆಯೇ ಸಾಗಿದ್ದೇವೆಂದರೆ ತಪ್ಪಲ್ಲವೆಂದು ಭಾವಿಸಿದ್ದೇನೆ. ಈ ಅವಸಾನದ ಕಡೆಗೆ ಹೋಗುವುದಕ್ಕೆ ಬಹು ಮುಖ್ಯವಾದ ಕಾರಣ ದೋಷಪೂರಿತ ಆಡಳಿತ ಮತ್ತು ಅಪ್ರಮಾಣಿಕತೆ. ಈ ದೋಷಪೂರಿತ ಆಡಳಿತ ಮತ್ತು ಅಪ್ರಮಾಣಿಕತೆಯಿಂದಾಗಿ ಇವತ್ತು ಸಹಕಾರಿ ರಂಗದ ಬಹುತೇಕ ಎಲ್ಲಾ 21 ಸಹಕಾರಿ ಸಕ್ಕರೆ ಕಾರ್ಖಾನೆಗಳೂ ಕೂಡ ಮುಚ್ಚುವ ಹಂತಕ್ಕೆ ಈಗಾಗಲೇ ತಲುಪಿದ್ದಾವೆ. ನನಗೆ

ಬಂದಿರುವ ಮಾಹಿತಿಯ ಪ್ರಕಾರ ಅವುಗಳ ಕ್ರೋಢೀಕೃತ ನಷ್ಟ 700 ಕೋಟಿ ರೂಪಾಯಿಗಳು. ನಾನು ಎಲ್ಲಾ ವಿಷಯವನ್ನೂ ಚರ್ಚೆ ಮಾಡುವುದಕ್ಕೆ ಇಲ್ಲಿ ಕಾಲಾವಕಾಶದ ಕೊರತೆ ಇರುವುದರಿಂದ ಸಂಕ್ಷಿಪ್ತವಾಗಿ ಆ ಲೋಪ ದೋಷಗಳನ್ನೂ ಸರ್ಕಾರದ ಗಮನಕ್ಕೆತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈ ರಾಜ್ಯದ ರೈತರ ಮನೆಯನ್ನು ಹಾಳು ಮಾಡಿದ್ದೇವೆ ನಾವು, ರೈತರು ನಾಶವಾಗಿ ಹೋಗಿದ್ದಾರೆ, ಅವರ ಹಣವನ್ನು ಕೊಳ್ಳೆಹೊಡೆದು, ಶುಗರ್ ಲಾಬಿಯವರು ಇವತ್ತು ಬೇಕಾದರೆ ಮಂತ್ರಿಗಿರಿ ಬೇಕಾದರೂ ಬಿಡುತ್ತಾರೆ ಆದರೆ ಆ ಶುಗರ್ ಲಾಬಿಯಲ್ಲಿ ಯಾರಿದ್ದಾರೆ ಅವರು ಆ ಅಧಿಕಾರವನ್ನು ಬಿಡುವುದಕ್ಕೆ ಅವರು ತಯಾರಿಲ್ಲವೆನ್ನುವುದನ್ನು ಹೇಳಬೇಕಾಗುತ್ತದೆ. ಈ ಶುಗರ್ ಮಾಫಿಯಾದಲ್ಲಿರುವವರು ಈ ಮಂತ್ರಿಯಾಗಿದ್ದರೆ ಬೇಕಾದರೆ ಪದವಿಯನ್ನು ಬಿಟ್ಟುಬಿಡುತ್ತಾರೆ 'ಆಗಿದ್ದರೆ ಇಲ್ಲಿ ಯಾರಾದರೂ ಇದ್ದಾರೆ. ಆದರೆ ಅವರು ಶುಗರ್ ಫ್ಯಾಕ್ಟರಿಯಲ್ಲಿ ಅಧಿಕಾರವನ್ನು ಬಿಡುವುದಕ್ಕೆ ತಯಾರಿಲ್ಲ. ಇವತ್ತು ರಾಜ್ಯದಲ್ಲಿ ಶುಗರ್‌ಕೇನ್ ಡೆವಲಪ್‌ಮೆಂಟ್‌ಗೆ ಏನು ಆದ್ಯತೆಯನ್ನು ಕೊಡಬೇಕಾಗಿತ್ತು, ಆ ಆದ್ಯತೆಯನ್ನು ಕೊಟ್ಟಿಲ್ಲ, ಇವತ್ತು ಶುಗರ್ ಕೇನ್ ಡೆವಲಪ್‌ಮೆಂಟ್‌ಗೆ ಆದ್ಯತೆಯನ್ನು ಕೊಟ್ಟಿದ್ದರೆ ಈ ಸಂಕಷ್ಟ ಕೂಡ ಬರುತ್ತಿರಲಿಲ್ಲ. ಶುಗರ್‌ಕೇನ್ ಡೆವಲಪ್‌ಮೆಂಟ್‌ಗೆ ಕೇಂದ್ರ ಸರ್ಕಾರ ಸೆಂಟ್ರಲ್ ಫಂಡ್‌ನಿಂದ 90 ಪರ್ಸೆಂಟ್ ಕೊಡುತ್ತದೆ. ಫ್ಯಾಕ್ಟರಿ ಫಂಡ್‌ನಿಂದ 10 ಪರ್ಸೆಂಟ್ ಕೊಟ್ಟಿದ್ದರೆ ಸಾಕಾಗಿತ್ತು, ಎಷ್ಟು ಭಾಗವನ್ನು ನಾವು ಕೊಟ್ಟಿದ್ದೇವೆ, ಅದನ್ನು ಸದುಪಯೋಗವನ್ನು ಮಾಡಿಕೊಂಡಿದ್ದೇವೆ ಶುಗರ್‌ಕೇನ್ ಡೆವಲಪ್‌ಮೆಂಟ್‌ಗಾಗಿ, ಆದ್ಯತೆಯನ್ನು ಕೊಟ್ಟಿದ್ದೇವೆಂದು ಇವತ್ತು ಮಂತ್ರಿಗಳು ಹೇಳಬೇಕು. ಕೊಡದೇ ಇದ್ದರೆ, ಏಕೆ ಕೊಟ್ಟಿಲ್ಲವೆನ್ನುವುದನ್ನೂ ಕೂಡ ತಿಳಿಸಬೇಕು. ಇನ್ನು ಎರಡನೇಯದಾಗಿ, ಕನ್ವರ್ಷನ್ ಕಾಸ್ಟ್, ಪರಿವರ್ತನೆ ಖರ್ಚು ನಮ್ಮ ರಾಜ್ಯದಲ್ಲಿ ಎಷ್ಟು ಇರಬೇಕಾಗಿತ್ತು, ನನಗೆ ಬಂದಿರುವ ಮಾಹಿತಿಯ ಪ್ರಕಾರ ಸುಮಾರು 250 ರೂಪಾಯಿಗಳೊಳಗೆ ಇರಬೇಕು. ಆದರೆ ಇದು ರಾಜ್ಯದಲ್ಲಾಗಿರುವುದು ಮೊನ್ನೆ 'ಪ್ರಜಾವಾಣಿ' ಪತ್ರಿಕೆಯಲ್ಲಿ ನೋಡಿದೆ. ಒಂದು ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದನೆ ಮಾಡುವುದಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ಗಿನ್ನಿಸ್ ಪುಸ್ತಕದ ದಾಖಲೆಗೆ ಸೇರಿಸೋಣ.

ಶ್ರೀ ಎ.ಟಿ. ರಾಮಸ್ವಾಮಿ : ದಾಖಲೆಗೆ ಸೇರಿ ಹೋಗಾಗಿದೆ, ಎರಡು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ, ಈ ನಿಮ್ಮ ರೆಗ್ಯುಲೇಟರಿ ಅಥಾರಿಟಿಯ ಅಧೀಕಾರಿಗಳಿದ್ದಾರಲ್ಲಾ, ಈ ಸರ್ಕಾರಕ್ಕೆ ರೈತರ ಬಗ್ಗೆ ಏನಾದರೂ ಕಾಳಜಿ ಇದ್ದರೆ ಮೊದಲು ಅವರನ್ನು ತೆಗೆದುಕೊಂಡು ಕಂಬಿ ಒಳಗೆ ಹಾಕಿ. ಇವರದ್ದು ದೊಗಳೆ ಜೋಬು, ಗೋಣಿಚೀಲದ ಜೋಬು, ಇವರಿಗೆ ಸಂಬಳ ಸಾಕಾಗುವುದಿಲ್ಲ, ಅದಕ್ಕೆ ರೈತರ ಮನೆಯನ್ನು ಇವರು ಹಾಳುಮಾಡಿದರು, ಇವರು ಮುಂಡೆ ಮೋಚ, ನಾನು ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮುಂಡೆ ಮೋಚವಲ್ಲ, ಮುಂಡ ಮೋಚ, ಅವರು (ಕಾರಜೋಳ) ನಿಜವಾಗಿ ಕೆಟ್ಟ ಅರ್ಥದಲ್ಲಿ ಬೇವರ್ಸಿ ಎಂದು ಹೇಳಲಿಲ್ಲ, ಆ ಕಡೆ ಆಡುವ ಭಾಷೆಯನ್ನು ಹೇಳಿದರು, ಅದನ್ನು ಇಷ್ಟು ದೊಡ್ಡದಾಗಿ, ಉದ್ದೇಶಪೂರ್ವಕವಾಗಿ ಹೇಳಿದರೆ ಹೇಗೆ ಸರ್ ?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) : ಆದರೆ ನೀವೇ ಸ್ವಲ್ಪ ಸಹಕಾರ ಮಾಡಬೇಕು, ಮುಂಡ ಎಂದು ಹೇಳಿ ಸ್ವಲ್ಪ ಸಡಿಲ ಮಾಡಿದಿರಿ.

ಶ್ರೀ ಎ.ಟಿ. ರಾಮಸ್ವಾಮಿ : ನಾನು ಸಂಕ್ಷಿಪ್ತವಾಗಿ ಬರುತ್ತೇನೆ, ಮಾಧುಸ್ವಾಮಿಯವರೇ, ಏನಾಗಿದೆ ಎನ್ನುವುದನ್ನು ಸಂಕ್ಷಿಪ್ತವಾಗಿ ಈ ಪರಿವರ್ತನ ಕಾಸ್ಟ್ ಏತಕ್ಕೆ ಜಾಸ್ತಿಯಾಗಿದೆ ಎನ್ನುವುದನ್ನು ನಾನು ನಿಮ್ಮ ಗಮನಕ್ಕೆ ತರುತ್ತೇನೆ. ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆ ಹಾಗೂ ಕಾಕಂಬಿಯನ್ನು ಕಡಿಮೆದರದಲ್ಲಿ ಮಾರಾಟಮಾಡುತ್ತಿರುವುದು, ಇದು ಬಹು ಮುಖ್ಯವಾದುದು; ನಾಲ್ಕೂವರೆ ಸಾವಿರ ರೂಪಾಯಿಗಳ ಒಂದು ಟನ್ ಕಾಕಂಬಿ ಇದ್ದರೆ, 1200 ರೂಪಾಯಿಗಳಿಗೆ ಮಾರಾಟಮಾಡುವುದಕ್ಕೆ ಇಲ್ಲಿಂದ ಅನುಮತಿಯನ್ನು ಕೊಡುತ್ತಾರೆ. ಎಲ್ಲಿ ಕೊಟ್ಟಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ರಸ್ತೆ ಅಭಿವೃದ್ಧಿಗೆ ಎಂದು ನಮ್ಮ ರಾಜ್ಯಕ್ಕೆ ಶುಗರ್ ಕೇನ್ ಸೆಸ್ ಏನು ಕಲೆಕ್ಟ್ ಆಗುತ್ತದೆ, ಸುಮಾರು 10 ಕೋಟಿ ರೂ ಬರುತ್ತದೆ. ಯಾರಾದರೂ ನಮ್ಮ ಶಾಸಕರು ಹೇಳಲಿ ನಿಮ್ಮ ನಿಮ್ಮ ವ್ಯಾಪ್ತಿಯಲ್ಲಿ ಎಲ್ಲಾದರೂ ಕೂಡ, ಶುಗರ್‌ಕೇನ್‌ನಿಂದ ಏನು ಸೆಸ್ ಬರುತ್ತದೆ, ಅದರಿಂದ ರಸ್ತೆ ಅಭಿವೃದ್ಧಿಗಳಾಗಿದ್ದಾವಾ? ಸುಮಾರು 10 ಕೋಟಿ ರೂಪಾಯಿಗಳು ಇದಕ್ಕಾಗಿ ಬರುತ್ತದೆ ಎನ್ನುವುದು ನಾನು ಕಲೆಕ್ಟ್ ಮಾಡಿರುವ ಮಾಹಿತಿಯಿಂದ ತಿಳಿದು ಬಂದಿದೆ. ನಾನು ಕಂಡಂತೆ ಎಲ್ಲೂ ರಸ್ತೆಗಳಾದ್ದನ್ನು ನೋಡಿಲ್ಲ. ಎಲ್ಲವನ್ನೂ ನುಂಗಿಹಾಕಿದ್ದಾರೆ. ಇದರ ಬಗ್ಗೆ ಮಾನ್ಯ ಸಚವರು ಗಮನಹರಿಸಬೇಕು ಎಂಬ ಮಾತು ಈ ಸಂದರ್ಭದಲ್ಲಿ ಹೇಳುತ್ತಾ ನ್ಯಾಷನಲ್ ಕೋ ಅಪರೇಟಿವ್

ಡೆವಲಪ್‌ಮೆಂಟ್ ನಿಗಮದವರು ಸಕ್ಕರೆ ಫ್ಯಾಕ್ಟರಿ ಅಭಿವೃದ್ಧಿಪಡಿಸಲು ಸಾಲ ಕೊಡುತ್ತಾರೆ. ಸಾಲಕೊಡಲು ಒಂದು ನಿಯಮ ಇದೆ. ಸಂಬಂಧಪಟ್ಟ ಇಲಾಖೆಯವರು ಹಣಕಾಸು ಇಲಾಖೆಗೆ ಕಳುಹಿಸಬೇಕು, ಹಣಕಾಸು ಇಲಾಖೆಯವರು ಬೇರೆಕಡೆಯಿಂದ ಸಾಲ ತೆಗೆದುಕೊಳ್ಳುವುದಕ್ಕೆ ಕ್ಯಾಬಿನೆಟಗೆ ಹೋಗಿ ಅನುಮತಿ ಪಡೆದು ತದನಂತರ ಸಾಲ ಪಡೆದುಕೊಳ್ಳಬೇಕು. ಅದರ ಬಗ್ಗೆ ಏನಾಗಿದೆ ಎಂದು ಕೆಲವನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಡಿಸ್‌ಪೋಜಲ್ ಆಫ್ ಮೊಲಾಸಿಸ್, ಅಂದಾಜು ಬೆಲೆ 4500 ರೂ ಇದೆ, ಒಂದು ಟನ್‌ಗೆ, ಆದರೆ 1500 ರೂಗೆ ಮಾರಾಟ ಮಾಡಲಿಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಒಂದು ಪತ್ರವನ್ನು ಪ್ರಿನ್ಸಿಪಾಲ್ ಸೆಕ್ರೆಟರಿ ಬರೆಯುತ್ತಾರೆ, 23–7–04 ರಲ್ಲಿ,

> "There is a request from the Naranja SSK in respect of molassas. The Chairman of the Naranja SSK has stated that, much before the Government, Had taken decision to sell Mos / asses, they had entered into formal agreement with a party and also taken necessary advance as there was some problem with regard to liquidity in the factory. A regular contract has been entered into, it would not be possible to unilaterally go against the terms and conditions of the contract and revok it."

ಅವರು ಮೊದಲು ಏನು ಮಾಡಿಕೊಂಡುಬಿಟ್ಟಿದ್ದರು, ಇಲ್ಲಿ ಕೂತುಕೊಂಡು ಪ್ರಧಾನ ಕಾರ್ಯದರ್ಶಿ ಅದೇಶ ಮಾಡುತ್ತಾರೆ; "It would not be possible to unilaterally go aginst the terms and conditions of the contract and revoke it."ಅವರಿಗೆ 1200 ರೂ ಕೊಡಲು ಇವರು ಷರತ್ತುಗಳಿಗೆ ಒಪ್ಪಿಕೊಂಡಿದ್ದರೂ ನಾಲ್ಕೂವರೆ ಸಾವಿರ ರೂ ಒಂದು ಟನ್‌ಗಿದ್ದರೆ 4700 ಟನ್‌ಗಳನ್ನು ಮಾರಾಟ ಮಾಡಲಿಕ್ಕೆ ಈ ಲೆಟರ್‌ನಲ್ಲಿ ಅದೇಶ ಕೊಟ್ಟರು. ಸುಮಾರು ಒಂದು ಕೋಟಿಗೂ ಹೆಚ್ಚು ರೂ; ಇದನ್ನು ಕೊಟ್ಟಂಥಹ ಅಧಿಕಾರಿಯನ್ನು ಅದಕ್ಕೇ ನಾನು ಹೇಳಿದ್ದು ರೆಗ್ಯುಲೇಟರಿ ಅಥಾರಿಟಿ ಏನಿದೆ ಇವರೇನು ಕತ್ತೆ ಕಾಯುತ್ತಿದ್ದಾರಾ? ದನ ಮೇಯಿಸುತ್ತಿದ್ದಾರಾ? ಇವರಿಗೇಕೆ ಸಂಬಳ ಕೊಟ್ಟುಕೊಂಡು ಎಂ ಎಸ್ ಬಿಲ್ಡಿಂಗ್‌ನಲ್ಲಿಟ್ಟುಕೊಂಡಿದ್ದೀರಿ? ಶುಗರ್

ಕಾರ್ಖಾನೆಯವರನ್ನಲ್ಲ ನೀವು ಜೈಲಿಗೆ ಹಾಕುವುದು ಈ ಇರೆಗ್ಯುಲಾರಿಟೀಸ್ ಆಗಿದ್ದರೆ ಮೈನರ್ ಬಿಡಿ, ಮೇಜರ್, ಇಲ್ಲಿ ಕೂತುಕೊಂಡು it is not possible ಅಂತ ಹೇಳುತ್ತಾರಲ್ಲಾ ಇವರನ್ನು ನೀವು ಏನು ಮಾಡಿದಿರಿ ? ನನಗೆ ನಿಮ್ಮ ಬಗ್ಗೆ ನಂಬಿಕೆ ಇದೆ, ದೇಶಪಾಂಡೆಯವರೇ, ಸ್ವಲ್ಪ ಕಮಿಟ್‌ಮೆಂಟ್ ಇದೆ ಅಂತ; ನಾನು ಹೇಳಿದೆ ಸಹಕಾರಿ ಆಂಧೋಳನದಲ್ಲಿ ಅವಸಾನದತ್ತ ಹೊರಟುಬಿಟ್ಟಿದ್ದೇವೆ ಅಂತ, ನೀವು ಅವರನ್ನೆಲ್ಲ ಬಲಿಹಾಕಬೇಕಾಗಿರುವುದು ಇವರನ್ನು ಬಲಿಹಾಕಿ. ಹೇಗೆ ಅನುಮತಿ ಕೊಟ್ಟರು? ಗೊತ್ತಿಲ್ಲವಾ ಇವರಿಗೆ? ಮಾಲಾಸಿಸನ್ನು ಯಾವರೀತಿ ಮಾರಾಟ ಮಾಡಿದರು ಅನ್ನುವುದಕ್ಕೆ ಇದು ಒಂದು ಉದಾಹರಣೆ ನಿಮಗೆ. ಇನ್ನೊಂದು committee for revitalisation of sugar industry, ಎಂದು ಹೇಳಿ ಕೇಂದ್ರ ಸರ್ಕಾರದ ಆಹಾರ ಇಲಾಖೆಯವರು ಈ ರಾಜ್ಯಕ್ಕೆ ಬರುತ್ತಾರೆ. ಅವರು ಈ ರಾಜ್ಯಕ್ಕೆ ಬಂದರೆ ಅತಿಥಿಗಳಾದ ಅವರನ್ನು ಗೌರವಾನ್ವಿತವಾಗಿ ಸತ್ಕರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ. ಅದರ ಬಗ್ಗೆ ನನಗೆ ಏನೂ ತಕರಾರಿಲ್ಲ. ಆದರೆ ನಿಮ್ಮ Commissioner for cane Development ಹಣ ಸಂಗ್ರಹಣೆ ಮಾಡುತ್ತಾರೆ, 21–6–2004 ರಂದು Under the Chairmanship of the Commissioner for Sugarcane Development and Director of Sugar, for arrangements to be made for the visit of the members of the Revitalisation committee Govt.of India, ಅದಕೊಂದು ಕಮಿಟಿಮಾಡಿ ಪ್ರೊಸಿಡಿಂಗ್ಸ್ ಮಾಡುತ್ತಾರೆ. "The factories noted below shall contribute Rs.25,000." 25 ಸಾವಿರ ರೂ ಗಳನ್ನು ಫ್ಯಾಕ್ಟರಿಯಿಂದ ಕಲೆಕ್ಟ್ ಮಾಡುತ್ತಾರೆ. ಕುಮಾರ ಕೃಪ ಅತಿಥಿಗೃಹ ಇದೆ ಅವರನ್ನು ತಂದು ಇಳಿಸಬಹುದು, ಆದರೆ ಎಲ್ಲಿ ಇಳಿಸುತ್ತಾರೆ ನೋಡೋಣ ಹೇಳಿ. ಅತ್ಯಂತ ದಬಾರಿಯಾಗಿರತಕ್ಕಂಥ ಹೋಟೆಲ್ ಲೀಲಾಪ್ಯಾಲೇಸ್, ಒಂದು ಸೂಟಿನ ರೆಂಟ್ ಎಷ್ಟು ಗೊತ್ತಾ? 6500 ರೂ. ಒಂದು ದಿವಸಕ್ಕೆ ಮಹಾರಾಜ ಸೂಟ್, ಇವನು ಯಾವ ಮಹಾರಾಜನಪ್ಪ, 6500 ರೂ ಪ್ಲಸ್ ಟ್ಯಾಕ್ಸ್ ಬರೀ ರೂಮಿನ ಬಾಡಿಗೆಗೆ. ರೈತರ ಮನೆ ಉಳಿಯುತ್ತದಾ, ರೈತರ ಮನೆ ಹಾಳಾಗುವುದಿಲ್ಲವಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಮಸ್ವಾಮಿಯವರೇ, ನಿಮ್ಮ ಕಷ್ಟ ನಮಗೆ ಅರ್ಥವಾಗುತ್ತದೆ. ಯಡಿಯೂರಪ್ಪನವರೇ, ತಾವು ಕೇಳಬೇಕು ಈಗ, ಒಬ್ಬ

ಆಡಳಿತ ಪಕ್ಷದ ಎಂ ಎಲ್ ಎ ನೇ ಹೀಗೆ ಹಾಕ್ಕೊಂಡು ಸರ್ಕಾರಕ್ಕೆ ಉಗಿದರೂ ಏನೂ ಅನ್ನಿಸುತ್ತಾ ಇಲ್ಲ ಅಂದರೆ......

ಶ್ರೀ ಎ.ಟಿ. ರಾಮಸ್ವಾಮಿ : ನಾನೇನೂ ಸರ್ಕಾರವನ್ನಲ್ಲ, ಈ ಆಡಳಿತದಲ್ಲಿರುವ ನ್ಯೂನತೆಗಳಿಗೆ ವ್ಯವಸ್ಥೆಗಳನ್ನು ಹೇಳುತ್ತಿದ್ದೇನೆ. ಅವರೇನು ಇದಕ್ಕೆ ಜವಾಬ್ದಾರರಾ? ನಿರಂತರವಾಗಿ ಇದು ನಡೆದುಕೊಂಡು ಬರುತ್ತಾ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉಪಾಧ್ಯಕ್ಷರೆ, ಏನು ಅವರು ಪ್ರಸ್ತಾಪಿಸುತ್ತಿದ್ದಾರೆ ಇದು ಬಹಳ ನೋವು ತರುವಂತಹ ಸಂಗತಿ. ಯಾರಿಗೂ ಶೋಭೆ ತರುವಂಥಹದಲ್ಲ. ನಿನ್ನೆ ಸಂಸದೀಯ ಪಟುಗಳ ಪುಸ್ತಕ ಬಿಡುಗಡೆಯಾಯಿತಲ್ಲಾ ಆ ಸಮಯದಲ್ಲಿ ಒಂದು ಮಾತು ಹೇಳಬೇಕು ಅಂತಿದ್ದೆ, ಸಮಯದ ಅಭಾವ ಇತ್ತು. ಈ ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ಚುನಾಯಿತ ಪ್ರತಿನಿಧಿಗಳ ಬಗ್ಗೆ ಜನ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಯಾರು ಒಂದು ಆದರ್ಶ ಜೀವನ ನಡೆಸಿ ಶಾಸಕರಾಗಿ ಸೇವೆ ಸಲ್ಲಿಸಿದರೋ ಅವರ ಜೀವನದ ಪರಿಚಯ ಮಾಡಿಕೊಳ್ಳುವಂತಹ ಪುಣ್ಯಕಾರ್ಯ ನಾವು ಮಾಡುತ್ತಿದ್ದೇವೆ. ಇದು ವೇದಿಕೆ ಮೇಲಿರುವವರಿಗೆ ಎದುರಿಗೆ ಕುಳಿತ ಶಾಸಕರಿಗೆ ಮೇಲ್ಪಂಕ್ತಿಯಾಗಬೇಕು ಅಂತ ನಿನ್ನೆ ನಾನು ಹೇಳಬೇಕೆಂದು ಇದ್ದೆ. ಇಲ್ಲಿ ಏನು ಪ್ರಶ್ನೆ ಗೊತ್ತಾ ರಾಮಸ್ವಾಮಿಗಳೇ? ತಾವು ಆಡಳಿತ ಪಕ್ಷದಲ್ಲಿದ್ದೀರಿ ಸತ್ಯಸಂಗತಿಯನ್ನು ಬಹಿರಂಗ ಮಾಡುತ್ತಿದ್ದೀರಿ, ನಾವು ವಿರೋಧಪಕ್ಷದಲ್ಲಿದ್ದೇವೆ ನಮಗೆ ಸಿಕ್ಕ ಮಾಹಿತಿ ಆಧರಿಸಿ ನಾವು ಬಹಿರಂಗ ಪಡಿಸುತ್ತೇವೆ. ನಾವು ಯಾವ ಅಧಿಕಾರಿಗಳು ಬಗ್ಗೆ ಮಾತನಾಡುತ್ತಿದ್ದೇವೆ ಯಾರು ಗೊತ್ತಿದ್ದೂ ತಿಮಿಂಗಿಲುಗಳಂತೆ ಹಗಲುದರೋಡೆ ಮಾಡುವವರಿಗೆ ಬೆಂಬಲ ಕೊಟ್ಟು ಒಂದು ರೀತಿ ಹಂಚಿಕೊಳ್ಳುವ ಕೊಟ್ಟು ತೆಗೆದು ಕೊಳ್ಳುವ ವ್ಯವಹಾರ ನಡೆಸುತ್ತಿದ್ದಾರೆ . ಅವರನ್ನು ಹದ್ದುಬಸ್ತಿನಲ್ಲಿ ಯಾರಿಡಬೇಕು ಸ್ವಾಮಿ? ಈ ಡೆಮಾಕ್ರಸಿ ವ್ಯವಸ್ಥೆಯಲ್ಲಿ ನಾನು ಅನೇಕಬಾರಿ ಹೇಳುತ್ತಿದ್ದೇನೆ. ಒಂದು ಸಾರಿ ಬ್ರಿಟೀಷರು ದೇಶ ಬಿಟ್ಟು ತೊಲಗಿಹೋದರೆ ನಮ್ಮೆಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ ಸಮಸ್ಯಗಳಿಗೆಲ್ಲಾ ಬ್ರಿಟೀಷರು ಕಾರಣ ಅಂತ ನಾವು ಅಂದುಕೊಂಡಿದ್ದೆವು. ಸ್ವಾತಂತ್ರಪೂರ್ವದಲ್ಲಿ ಹೋರಾಟ ಮಾಡುವಾಗ, ಆದರೆ ಈಗ ನಮ್ಮದೇ ವ್ಯವಸ್ಥೆ, ನಮ್ಮದೇ ಸರ್ಕಾರ, ನಾವೇ ಕಂಟ್ರೋಲ್ ಮಾಡುವ ಅಧಿಕಾರಿಗಳು, ಅವರ ಮೇಲೆ ನಮಗೆ ಬಿಗಿ ತಪ್ಪಿದಾಗ ಅವರು ಏನು ಮಾಡಿದರೂ ಅಸ್ತು ಅನ್ನುವ ಪ್ರಯತ್ನ ನಾವು ಮಾಡಿದಾಗ ಅವರ ಪರವಾಗಿಯೇ ನಾವು ನಿಂತಾಗ, ಮೊನ್ನೆ ಎಸ್ ಸಿ,ಎಸ್ ಟಿ, ನಿಗಮದ ಚರ್ಚೆ ಆದಾಗ ತಾವು

ಗಮನಿಸಿದಿರಿ, ಗೊತ್ತಿದ್ದೋ, ಗೊತ್ತಿಲ್ಲದೆಯೋ, ಇವೆಲ್ಲಕ್ಕೂ ರಕ್ಷಣೆ ಕೊಡುವಂತಹ ಜವಾಬ್ದಾರಿ ನಮ್ಮದು ಅಂತ ತಿಳಿದುಕೊಂಡು ನಾವೇನು ಚುನಾಯಿತ ಪ್ರತಿನಿಧಿಗಳಾಗಿ ಕೆಲಸ ಮಾಡುತ್ತಿದ್ದೇವೆ ಆದರೆ ಇನ್ನೂ ಆ ಗುಡಿಸಲಿನಲ್ಲಿ ಸಾಯುತ್ತಿರುವ ನೀವು ಹೇಳಿದ ರೈತ ನೀವು ಹೇಳಿದಂತೆ ಶುಗರ್ ಫ್ಯಾಕ್ಟರಿಗಳದ್ದೇ ಒಂದು ಕರ್ಮಕಾಂಡ. ಹಗಲುದರೋಡೆ ನಡೆಯುತ್ತಿದೆ. ಒಂದಲ್ಲ ಎರಡಲ್ಲ ನೂರು ಉದಾಹರಣೆಗಳಿವೆ. ಇದನ್ನು ಎಲ್ಲಾದರೂ ಒಂದು ಕಡೆ ಬಿಗಿ ಮಾಡುವಂತಹ ಆ ರಾಜಕೀಯ ಇಚ್ಛಾಶಕ್ತಿ ಇಲ್ಲದೇ ಇದ್ದರೆ ಇದನ್ನು ಯಾರೂ ಸರಿ ಮಾಡುವುದು? ಇಷ್ಟೆಲ್ಲಾ ಪ್ರಸ್ತಾಪ ಮಾಡಿದಿಲ್ಲ. ನಾವಂತೂ ವಿರೋಧ ಪಕ್ಷದವರು ಇಲ್ಲಿದ್ದು ಇರೋದು ಹೇಳುತ್ತೇವೆ ಪಾಪ ಅದು ಸರಿ ಅನ್ನಿಸುವುದಿಲ್ಲ. ನೀವು ಪ್ರಸ್ತಾಪಿಸಿದ ಮೇಲೆ ಸತ್ಯಾಂಶ ಕಂಡಮೇಲೆ ನಾಳೆ ತುರ್ತು ಅಧಿವೇಶನ ಸೇರುವ ಕಾಲಕ್ಕಾದರೂ ಅವನಿಗೆ ಶಿಕ್ಷೆಯಾಯಿತು, ಅವನನ್ನು ಸಸ್ಪೆಂಡ್ ಮಾಡಿದರು, ಆಮೇಲೆ ಅವನನ್ನು ಜೈಲಿಗೆ ಕಳುಹಿಸಿಕೊಟ್ಟರು ಅಂದರೆ ಅದಕ್ಕೊಂದು ಅರ್ಥವಿದೆ. ಕಾದು ನೋಡೋಣ. ನೀವು ಪ್ರಸ್ತಾಪಿಸಬಾರದು ಅಂತ ನಾನು ಹೇಳುತ್ತಿಲ್ಲ. ನಿನ್ನೆ ಮಾನ್ಯ ಮಹಿಮಾಪಟೇಲರು ಮಾತನಾಡಿದಾಗ ನನಗೆ ಗಾಬರಿಯಾಯಿತು. ಹೆಲಿಕಾಪ್ಟರ್ ರಿಪೇರಿಗಾಗಿ ಎಷ್ಟು ಕೋಟಿ ಖರ್ಚು ಮಾಡಿದರು, ಮಾರಿದ್ದಷ್ಟಕ್ಕೆ? ಹಾಗಾದರೆ ಒಳವ್ಯವಹಾರ ಎಷ್ಟು? ನಮ್ಮ ಕೈಗಾರಕಾ ಸಚಿವರು ಉತ್ತರ ಕೊಡುವಾಗ ಆ ಪಾಯಿಂಟ್‌ಗೆ ಅವರು ಹೋಗಲೇ ಇಲ್ಲ. ಅಂದರೆ ಇವೆಲ್ಲವೂ ಸಹ ಎಲ್ಲೋ ಒಂದು ಕಡೆ ಆತಂಕ ತರುವಂತಹದ್ದು ಮತ್ತೆ ನಾವೇನು ಕಸ್ಟೋಡಿಯನ್ ಎಂದು ಜನರ ಪರವಾಗಿ ನಾವಿಲ್ಲಿ ಕುಳಿತಿದ್ದೇವೆ ಅದಲ್ಲೋ ತಿರುಗ ಮುರುಗ ಆಗುತ್ತಿದೆಯಲ್ಲಾ, ಇದು ಆಘಾತ ತರುವಂತಹ ಸಂಗತಿ.

ಶ್ರೀ ಎಸ್. ರಾಜೇಂದ್ರನ್ : ಉಪಾಧ್ಯಕ್ಷರೆ, ತಾವು ಹೇಳಿದ್ದು ನಮಗೆ ಒಂದು ಸಂತೋಷ ಆಯಿತು. ನೋವಾಗಲಿಲ್ಲ. 65 ಸಾವಿರ ರೂಂ ರೆಂಟ್ ಎಂದು ಹೇಳಿದರೆ ಫಸ್ಟ್ ಟೈಮ್ ನನಗೆ ಗೋತ್ತಾಗಿದೆ. ಯಾವ ಹೋಟೆಲ್ ಎಂದು ಪೂರ್ತಿ ಅಡ್ರೆಸ್ ಕೊಟ್ಟರೆ ಕರ್ನಾಟಕ ರಾಜ್ಯದಲ್ಲಿ ಎಲ್ಲರಿಗೂ ಗೊತ್ತಾಗುತ್ತದೆ. 65 ಸಾವಿರಕ್ಕೆ ಬೆಂಗಳೂರಿನ ಹೋಟಲ್‌ನಲ್ಲಿ ಒಂದು ರೂಂ ಇದೆ. ಆಶ್ರಯ ಸ್ಕೀಂ ಮನೆಯೂ ಅಷ್ಟು ಇಲ್ಲ. ಒಂದೇ ದಿವಸಕ್ಕೆ 65 ಸಾವಿರ ರೂಪಾಯಿ. ನಿಜವಾಗಿಯೂ ಬಹಳ ಸಂತೋಷ. ಈಗ ಎಲ್ಲರಿಗೂ ಗೊತ್ತಾಗಿದೆ.

ಶ್ರೀ ಎ.ಟಿ. ರಾಮಸ್ವಾಮಿ : ನಾನು ಹತ್ತು ಸಲ ಪರಿಶೀಲನೆ ಮಾಡಿದೆ. 65 ಸಾವಿರ ರೂಪಾಯಿ ಬಾಡಿಗೆ ಕೊಡತಕ್ಕ ರೂಂ ಇದೆಯಾ ಎಂದು ನಾನೂ ಯೋಚಿಸಿದೆ. ನಾನು ಐದು ಸಾವಿರ, ಆರುಸಾವಿರ, ಇರಬಹುದು ಮ್ಯಾಕ್ಸಿಮಮ್ ಎಂದು ಆಲೋಚನೆ ಮಾಡಿದ್ದೆ. ನನ್ನ ಆಲೋಚನೆ ಮಟ್ಟ ಅಷ್ಟೇನೇ, ಕೊನೆಗೆ ಟ್ಯಾರಿಫ್ ತರಿಸಿದೆ. ಯಾವ ಸೂಟ್‌ನಲ್ಲಿ ಉಳಿದು ಕೊಂಡಿದ್ದರೂ ಎನ್ನುವುದನ್ನೂ ತರಿಸಿದೆ. ನೋಡಿದರೆ ಮಹಾರಾಜ ಸೂಟ್‌ನಲ್ಲಿ ಉಳಿದುಕೊಂಡಿದ್ದಾರೆ. ಮಹಾರಾಜ ಸೂಟ್‌ನ ದಿನದ ಬಾಡಿಗೆ 65 ಸಾವಿರ ರೂ ಎಂದಾಗ ನನಗೆ ಬಹಳ ನೋವಾಯಿತು. ರೈತರ ಮನೆ ಹಾಳಾಗದೇ ಇನ್ನು ಹೇಗೆ ಉದ್ಧಾರ ಆಗುತ್ತದೆ ಹೇಳಿ. ಯಾರ ದುಡ್ಡು ಹೇಳಿ? ಈ ಸಹಕಾರಿ ಸಕ್ಕರೆ ಕಾರ್ಖಾನೆಗಳು ಉದ್ಧಾರ ಆಗದೇಇದ್ದರೆ.

ಶ್ರೀ ಎಸ್.ರಾಜೇಂದ್ರನ್ : ಒಂದು ನಿಮಿಷ ರಾಮಸ್ವಾಮಿಯವರೇ, ಟಾಯಲೆಟ್‌ಗಳು ಬೆಳ್ಳಿಯಲ್ಲಿ ಇರಬಹುದು. ಸಿಲ್ವರ್, ಗೋಲ್ಡ್ ಆ ತರಹ. ಹೀಗೆ ಇದೆ. ದುಬೈನಲ್ಲಿ ಎಲ್ಲಾ ಗೋಲ್ಡ್ ಟಾಯಲೆಟ್ ಇದೆ. ಆ ತರಹ ಬೆಂಗಳೂರಿನಲ್ಲಿರುವುದು ಒಂದು ಬಹಳ ಸಂತೋಷವಲ್ಲ, ಒಂದು ಗೌರವ.

ಶ್ರೀ ಎ.ಟಿ. ರಾಮಸ್ವಾಮಿ : ಅಲ್ಲಿಯ ಕಾರ್ಯದರ್ಶಿಗಳು ಬಂದಿದ್ದರು. ರೀವೈಟಲೇಷನ್ ಕಮಿಟಿಯ ಛೇರ್‌ಮನ್‌ರವರು, ಅವರನ್ನು ಗೌರವಯುತವಾಗಿ ಕಾಣಬೇಕಾದ್ದು ನಮ್ಮ ಕರ್ತವ್ಯ. ಅದು ಈ ರಾಜ್ಯದ ಸಂಸ್ಕೃತಿ; ನಮ್ಮ ಧರ್ಮ, ಏನಿದೆ ಅದರ ಬಗ್ಗೆ ನನ್ನ ತಕರಾರು ಇಲ್ಲ. ಅವರನ್ನು ಕರೆದು ಉಪಚಾರ ಮಾಡಲಿ. ಆದರೆ ಮಹಾರಾಜಾ ಸೂಟ್‌ನಲ್ಲಿ 65 ಸಾವಿರ ರೂಪಾಯಿ ಒಂದು ದಿನದ ಬಾಡಿಗೆ ಕೊಟ್ಟು ಪ್ಲಸ್ ಟ್ಯಾಕ್ಸ್, ಪ್ಲಸ್ ಊಟದ ಖರ್ಚು. ಇವರು ಬಂದು ಏನು ಮಾಡಿದರು? ಇದರ ಬಗ್ಗೆ ಅಫಿಷಿಯಲ್ ಆಗಿ ಕಾಗದ ಬರೆದು ಪ್ರತಿ ಸಕ್ಕರೆ ಕಾರ್ಖಾನೆಗಳಿಂದ 25 ಸಾವಿರ ರೂ ಸಂಗ್ರಹಣೆ ಮಾಡುವ ಮಟ್ಟಕ್ಕೆ ನಿಮ್ಮ ಮೇಲಾಧಿಕಾರಿಗಳು ಇಲ್ಲಿಂದ ಕುಳಿತು ಅದೇಶ ಮಾಡುತ್ತಾರಲ್ಲಾ, ನಾನು ಅದಕ್ಕೇ ಹೇಳಿದ್ದು. ಇವರು ರೆಗ್ಯುಲೇಟರಿ ಅಥಾರಿಟೀಸ್ ಏನು ಇದ್ದಾರೆ, ಇವರ ಮೇಲೆ ನೀವು ಕ್ರಮ ತೆಗೆದುಕೊಳ್ಳಿ, ಶುಗರ್ ಫ್ಯಾಕ್ಟರೀಸ್‌ಗಳು ಸರಿ ಹೋಗುತ್ತವೆ. ಇವರದ್ದೇ ದೊಗಳೆ ಜೇಬು ಅಂತ ನಾನು ಹೇಳಿದ್ದು. ಮತ್ತೊಂದು ವಿಚಾರ ನಾನು ಹೇಳಿದೆ. ನಾನು ಎನ್‌ಸಿ ಡಿಸಿ ಬಗ್ಗೆ ಹೇಳಿದೆ. ನ್ಯಾಶನಲ್ ಕೋ ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಹೇಳಿದೆ. ಈ ಶುಗರ್

ಫ್ಯಾಕ್ಟರಿಗಳ ಅಭಿವೃದ್ಧಿಗಾಗಿ ಇವರು ಸಾಲವನ್ನು ಕೊಡುತ್ತಾರೆ. ಸಾಲ ಕೊಡಬೇಕಿದ್ದರೆ ಸಂಬಂಧಪಟ್ಟ ಸಹಕಾರ ಇಲಾಖೆಯವರು .....

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ನಿಮಿಷ, ಯೀಲ್ಡ್ ಆಗಿ. ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಾನ್ಯ ಎಂ.ಪಿ. ಪ್ರಕಾಶ್‌ರವರೆ.

ಉಪಾಧ್ಯಕ್ಷರು : ಅವರು ಮುಂದುವರೆಸಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ, ಅವರು ಮಾತು ಮುಂದುವರಿಸಲಿ. ನಾನು ಏಕೆ ಎದ್ದಿದ್ದೇನೆ ಎಂದರೆ ನಾನು ಅತ್ಯಂತ ವಿನಯದಿಂದ ಸರ್ಕಾರಕ್ಕೆ ಮಾನ್ಯ ಉಪಾಧ್ಯಕ್ಷರ ಮೂಲಕ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ರಾಮಸ್ವಾಮಿಯವರು ಬಹಳ ಗಂಭೀರವಾದ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆ. ಇವತ್ತೆಲ್ಲಾ ಚರ್ಚೆ ಆಗಲಿ. ರಾತ್ರಿ 7,8 ಗಂಟೆ ಆಗಲಿ. ನನಗೇನೂ ಚಿಂತೆ ಇಲ್ಲ. ನನ್ನ ವಿನಂತಿ ಎಂದರೆ ಅತ್ಯಂತ ಪ್ರಮುಖವಾದಂತಹ ಆಂಧ್ರ ಸರ್ಕಾರದ ವಿರುದ್ಧ ನಾವೇನು ವಿಷಯ ಚರ್ಚೆ ಮಾಡುತ್ತಿದ್ದೇವೆ, ಇನ್ನೂ ಎರಡು ದಿನ ಅಧಿವೇಶನವನ್ನು ಮುಂದುವರಿಸಿ, ತಪ್ಪೇನೂ ಇಲ್ಲ. ಯಾರಿಗೆ ಬಿಡುವು ಇದೆಯೋ ಅವರು ಬರಲಿ. ಯಾರಿಗೆ ಬಿಡುವು ಇಲ್ಲದಿದ್ದರೆ ನಾನೇನೂ ಚಿಂತೆ ಮಾಡುವುದಿಲ್ಲ. ಆದರೆ ಇಂಥ ಗಂಭೀರವಾದ ವಿಷಯವನ್ನು ನಾವು ಚರ್ಚೆ ಮಾಡಲಿಲ್ಲ ಅದಕ್ಕೆ ಪರಿಹಾರವನ್ನು ಹುಡುಕಲಿಲ್ಲ ಎಂದರೆ ಈ ಕನ್ನಡ ನಾಡಿನ ಜನ ನಮ್ಮನ್ನು ಕ್ಷಮಿಸುವುದಿಲ್ಲ. ಆ ಅಪರಾಧಕ್ಕೆ ನಾವು ನೀವು ತುತ್ತಾಗುವುದು ಬೇಡ. ಆದ್ದರಿಂದ ನನಗೇನೂ ಅರ್ಜೆಂಟ್ ಇಲ್ಲ. ನಿನ್ನೆನೂ ನಾನು ಅದೇ ಹೇಳಿದೆ. ಅಧ್ಯಕ್ಷರ ಕೊಠಡಿಗೆ ಹೋಗೋಣ ಮತ್ತು ಸಮಾಧಾನಕರವಾಗಿ ಚರ್ಚೆ ಮಾಡೋಣ. ನಾವು ಸರ್ಕಾರಕ್ಕೆ ಸಹಕಾರ ಕೊಡುತ್ತೇವೆ. ಈ ವಿಷಯದಲ್ಲಿ ಒಂದಾಗಿ ಹೋರಾಟ ಮಾಡಿ ನಮಗಾಗಿರುವಂತಹ ಅನ್ಯಾಯವನ್ನು ಸರಿಪಡಿಸಿಕೊಳ್ಳೋಣ ಎಂದು ಹೇಳಿದೆ. ಈಗಲೂ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಶ್ರೀ ರಾಮಸ್ವಾಮಿಯವರು ವಿಷಯ ಚರ್ಚೆ ಮಾಡುತ್ತಿದ್ದಾರೆ. ಇನ್ನೂ ಅನೇಕ ಪ್ರಮುಖವಾದ ವಿಷಯಗಳು ಇವೆ. ಚರ್ಚೆ ಆಗಲಿ. ನಾಳೆ ಬೆಳಿಗ್ಗೆ ಈ ವಿಷಯವನ್ನು ತೆಗೆದುಕೊಳ್ಳೋಣ. ಇದನ್ನು ನಾವು ಮಾಡಲಿಲ್ಲ ಎಂದರೆ ನಾವೇನು ಸ್ವಾಮಿ? ನಮ್ಮ ಡ್ಯೂಟಿ ನಾವು ಮಾಡಿ ಬಿಟ್ಟು ಹೋಗುತ್ತೇವೆ. ಆದರೆ ನಾವು ರಾಜ್ಯದ ಜನತೆಗೆ ದ್ರೋಹ ಮಾಡಿದಂತೆ ಆಗುತ್ತದೆ. ಎಲ್ಲೋ ಒಂದು ಕಡೆ ಕೇಂದ್ರ ಸರ್ಕಾರ, ಆಂಧ್ರ ಪ್ರದೇಶದ ಸರ್ಕಾರವನ್ನು ಉಳಿಸುವುದಕ್ಕೆ, ಈ ಒಂದು ಸಮ್ಮಿಶ್ರ ಸರ್ಕಾರ ಅವರ ಪರವಾಗಿ ನಿಂತು ಕನ್ನಡ ನಾಡಿನ ಹಿತವನ್ನು

ಮರೆಯಿತು ಎನ್ನುವ ಅಪರಾಧಕ್ಕೆ, ಆ ಒಂದು ಆಕ್ಷೇಪಣೆಗೆ ತಾವು ತುತ್ತಾಗಬೇಡಿ ಎಂಬುದು ಮಾತ್ರ ನನ್ನ ವಿನಂತಿ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೆ, ಎನ್‌ಸಿಡಿಸಿ ವಿಚಾರ ನಾನು ಹೇಳುತ್ತಿದ್ದೆ. ನ್ಯಾಶನಲ್ ಕೋ ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಸಾಲ ಕೊಡಬೇಕಿದ್ದರೆ ಸಂಬಂಧಪಟ್ಟ ಸಹಕಾರಿ ಇಲಾಖೆಯವರು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಕ್ಯಾಬಿನೆಟ್‌ಗೆ ಕಳುಹಿಸಿ, ಕ್ಯಾಬಿನೆಟ್‌ನ ಒಪ್ಪಿಗೆ ಆದ ನಂತರ ಅವರ ಪ್ರಪೋಸಲ್ ಅನ್ನು ಎನ್‌ಸಿಡಿಸಿಗೆ ಕಳುಹಿಸಿ, ಅಲ್ಲಿಂದ ಸಾಲ ಪಡೆದುಕೊಳ್ಳಬೇಕು. The meeting held in the chamber of chief secretary on 15-3-2004..

ನಾನು ಎಲ್ಲವನ್ನೂ ಓದುವುದಿಲ್ಲ. ಕೆಲವನ್ನು ಮಾತ್ರ ನಾನು ಓದುತ್ತಿದ್ದೇನೆ.

> "Finance Department explained in detail the serious problem being faced by Finance Department due to Cooperation Department sending proposals for NCDC loans directly to NCDC in clear violation of guidelines issued by Finance Department"

ಇದು ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಹೇಳಿರತಕ್ಕದ್ದು. ಇನ್ನೊಂದು ಕಡೆ ಹೇಳುತ್ತಾರೆ.

> "Transaction of business rules. It is the duty of the Cooperation Department to refer all borrowing proposals to Finance Department undertake approval of cabinet..."

ಎನ್ನತಕ್ಕದ್ದನ್ನು ಚೀಫ್ ಸೆಕ್ರೆಟರಿ ಅವರ ಅಧ್ಯಕ್ಷತೆಯಲ್ಲಿ 15-03-04 ರಲ್ಲಿ ಏನು ಮೀಟಿಂಗ್ ಮಾಡಿದರು, ಅದರಲ್ಲಿ ಸ್ಪಷ್ಟವಾಗಿ ಹೇಳುತ್ತಾರೆ. ಅಕೌಂಟೆಂಟ್ ಜನರಲ್‌ರವರೂ ಕೂಡ ಹೇಳುತ್ತಾರೆ.

> "Total amount of NCDC loans that have not been thus accounted under internal debt of the State Government works out to be Rs. 113 cr., 38 lakhs. It appears that the demand drafts from NCDC might have been straightaway credited to the current account of the

> Principal Secretary in the Karnataka State Cooperative Apex Bank for disbursement to the concerned beneficiaries. As per the accounting procedure, all loans raised by Government of Karnataka from any source and for any purpose must necessarily be passed through Consolidated Fund of the State and repayments made should also be accounted as expenditure under Consolidated Fund of the State.''

ಎಂದು ಹೇಳುತ್ತಾರೆ. ಇವರು ಕ್ಲಿಯರ್ ಆಗಿ ವಯಲೇಷನ್ ಮಾಡಿ ಇದನ್ನು ಕೊಟ್ಟರು. ಇದರ ಹಿಂದೆ ಒಂದು ದೊಡ್ಡ ಕರ್ಮಕಾಂಡ ಇದೆ. ಕೋಆಪರೇಷನ್ ಡಿಪಾರ್ಟ್‌ಮೆಂಟ್‌ನವರು ಈ ಪ್ರಪೋಸಲ್ ರೆಡಿ ಮಾಡಿದರು. ಎಲ್ಲಿ ಇದರ ಡೀಲಿಂಗ್ಸ್ ಆಗುತ್ತದೆ ಎಂದರೆ ಇದೇ ಲೀಲಾ ಪ್ಯಾಲೇಸ್‌ನಲ್ಲಿ. ಮಾನ್ಯ ರಾಜೇಂದ್ರ ಅವರೇ, ಈ ಸ್ಟೇಟ್ ಅಗ್ರಿಕಲ್ಚರಲ್ ಮಿನಿಸ್ಟರ್, ಕೇಂದ್ರ ಕೃಷಿ ರಾಜ್ಯ ಸಚಿವರು ಅವತ್ತು ಯಾರು ಇದ್ದರು ಎಂದರೆ ಶ್ರೀ ಹುಕುಂದೇವ್ ನಾರಾಯಣ್ ಸಿಂಗ್ ಎಂದು ಹೇಳಿ ಇದ್ದರು. ಪಾರ್ಟಿ ಯಾವುದು ಎಂಬುದು ನನಗೆ ಗೊತ್ತಿಲ್ಲ. ಸ್ಟೇಟ್ ಅಗ್ರಿಕಲ್ಚರಲ್ ಮಿನಿಸ್ಟರ್ ಸೆಂಟ್ರಲ್‌ನಲ್ಲಿದ್ದರು. ಅವರಿಗೆ ಮೂರು ಪರ್ಸೆಂಟ್ ಕೊಡುತ್ತಾರೆ. ಬೇಕಾದರೆ ಇದನ್ನು ತನಿಖೆ ಮಾಡಿಸಲಿ. ಇದು ಸಾಬೀತಾಗಲಿಲ್ಲ ಎಂದರೆ ನಾನು ಈ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತೇನೆ. ಮೂರು ಪರ್ಸೆಂಟ್ ಅನ್ನು ಅವರಿಗೆ ಕೊಡುತ್ತಾರೆ. ಇದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟಿನ ಒಪ್ಪಿಗೆ ಇಲ್ಲ, ಕ್ಯಾಬಿನೆಟ್‌ನ ಒಪ್ಪಿಗೆ ಇಲ್ಲ. ನೂರಾರು ಕೋಟಿ ರೂಪಾಯಿಗಳನ್ನು ಎಸ್‌ಸಿಡಿಸಿಯವರು ಡೈರೆಕ್ಟಾಗಿ ಕೋಆಪರೇಷನ್ ಡಿಪಾರ್ಟ್‌ಮೆಂಟಿಗೆ ಕೊಡುತ್ತಾರೆ. ಇದರ ಬಗ್ಗೆ ಸರ್ಕಾರಕ್ಕೆ ಗೊತ್ತಿದ್ದರೂ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ಎನ್ನತಕ್ಕದ್ದೇ ನನ್ನ ಕಳಕಳಿಯ ವಿನಂತಿ. ಹೇಗೆ ಕೊಟ್ಟರು? ಬೇಕಿದ್ದರೆ ಸನ್ಮಾನ್ಯ ಕೋ ಆಪರೇಷನ್ ಸಚಿವರು ಇದರ ಬಗ್ಗೆ ಒಂದು ತನಿಖೆ ಮಾಡಿಸಲಿ. ಹೇಗೆ ಅಲ್ಲಿಗೆ ಡೈರೆಕ್ಟಾಗಿ ಹೋಯಿತು ಎಂದು ತನಿಖೆ ಮಾಡಲಿ. ಅವರು ಕೊಡಲಿಕ್ಕೆ ಅವಕಾಶವೇ ಇಲ್ಲ. ಥ್ರೂ ಪ್ರಾಪರ್ ಛಾನೆಲ್ ಹೋಗಿಲ್ಲ. ಒಂದು ಲಕ್ಷ, ಎರಡು ಲಕ್ಷದ ವ್ಯವಹಾರ ಅಲ್ಲ ಇದು. ನೂರಾರು ಕೋಟಿ ರೂಪಾಯಿಗಳ ವ್ಯವಹಾರ ಇದು. ಆ ಎನ್‌ಸಿಡಿಸಿಗೆ ಅವರೇ ಛೇರ್ಮನ್. ಸೆಂಟ್ರಲ್‌ನ ಸ್ಟೇಟ್ ಅಗ್ರಿಕಲ್ಚರಲ್ ಮಿನಿಸ್ಟರ್, ಛೇರ್ಮನ್. ಡೈರೆಕ್ಟಾಗಿ ಅವರು ಮತ್ತೆ

ರಿಲೀಸ್ ಮಾಡಿ ಕೋಆಪರೇಷನ್ ಡಿಪಾರ್ಟ್‌ಮೆಂಟಿಗೆ ಕೊಟ್ಟರು. ಅಕೌಂಟೆಂಟ್ ಜನರಲ್ ಕೂಡ ಅಬ್ಜೆಕ್ಷನ್ ಹಾಕುತ್ತಾರೆ. ಈ ರಾಜ್ಯದ ಚೀಫ್ ಸೆಕ್ರೆಟರಿ ಕೂಡ ಮಾಡಿರುವುದು ಕಾನೂನು ಬಾಹಿರ ಎಂದು ಹೇಳಿ ಅಬ್ಜೆಕ್ಷನ್ ಹಾಕುತ್ತಾರೆ. ಏಕೆ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ? ಮೇಲಧಿಕಾರಿಗಳು ಎಂತಲಾ? ಅದಕ್ಕೇ ನಾನು ಪ್ರಥಮವಾಗಿ ಒಂದು ಮಾತು ಹೇಳಿದ್ದು. ಈ ರೆಗ್ಯುಲೇಟರಿ ಅಥಾರಿಟೀಸ್ ಏನು ಇದ್ದಾರೆ, ಇವರದ್ದು ಇಲ್ಲಿ ಮಹಾ ಅಪರಾಧ ಇದೆ, ದೋಷ ಇದೆ. ಕಾನೂನು ಬಾಹಿರವಾಗಿ ಇವರು ಕೆಲಸ ಮಾಡುತ್ತಿದ್ದಾರೆ. ಇವರನ್ನು ಬಲಿ ಹಾಕಿ. ತದನಂತರ ಈ ಸಹಕಾರಿ ರಂಗ ಸುಧಾರಣೆ ಆಗುತ್ತದೆ. ರೈತರ ಮನೆಗಳು ಅಲ್ಪಸ್ವಲ್ಪ ಮಟ್ಟಿಗೆ ಉದ್ಧಾರ ಆಗುತ್ತವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತಿದ್ದೇನೆ. ಹಿರಿಯೂರಿನಲ್ಲಿ ವಾಣಿ ವಿಲಾಸ ಸಕ್ಕರೆ ಕಾರ್ಖಾನೆ ಇದೆ. ಸುಪ್ರೀಂ ಕೋರ್ಟ್‌ಗೆ ಹೋದರು. ಲೇ ಆಫ್ ಕಾಂಪೆನ್ಸೇಷನ್‌ಗೆ ಹೋದರು. ನಿಮ್ಮ ಜಿಲ್ಲೆ ಅದು ಇರಬಹುದು. ತಮಗೆ ನನಗಿಂತಲೂ ಚೆನ್ನಾಗಿ ಗೊತ್ತಿರಬಹುದು. ಆದರೆ ಆ ಸ್ಥಾನದಿಂದ ಕುಳಿತು ತಾವೇನೂ ಪ್ರತಿಕ್ರಿಯೆ ವ್ಯಕ್ತಪಡಿಸಲಿಕ್ಕೆ ಆಗುತ್ತಿಲ್ಲ. ನೀವು ಮೌನ ವೇದನೆಯನ್ನೇ ಅನುಭವಿಸಬೇಕಾಗುತ್ತದೆ. ಮೂರು ಕೋಟಿಗೆ ಸಕ್ಕರೆ ಮಾರಾಟ ಮಾಡಿ ಕೊಡುತ್ತೇವೆ ಎಂದು ಕೋರ್ಟಿಗೆ ಹೇಳಿದ್ದರು. 1 ಲಕ್ಷದ 30 ಸಾವಿರ ಕ್ವಿಂಟಾಲ್ ಸಕ್ಕರೆಯನ್ನು ಮಾರಾಟ ಮಾಡಿದರು. ಎಂಟೈರ್ ಅಮೌಂಟನ್ನು ತೆಗೆದುಕೊಳ್ಳಲಿಲ್ಲ. ಸಾಲ ಕೊಟ್ಟು ಬಿಟ್ಟರು. ಎಷ್ಟಕ್ಕೆ? 990 ರೂಪಾಯಿಗೆ. ಅವತ್ತು ಆ ತಿಂಗಳಿನಲ್ಲಿದ್ದಂತಹ ಸರಾಸರಿಯ ಸಕ್ಕರೆ ಧಾರಣೆ 1173 ರೂಪಾಯಿ. ನಿಮಗೂ ಗೊತ್ತಿದೆ. 990 ರೂಪಾಯಿಗಳಿಗೆ ಮಾರಾಟ ಮಾಡಿದರು. ಅವೊತ್ತು ನಮ್ಮ ರಾಜ್ಯದಲ್ಲಿ ಯಾವ್ಯಾವ ವರ್ಷಗಳಲ್ಲಿ ಯಾವ್ಯಾವ ತಿಂಗಳುಗಳಲ್ಲಿ ಎಷ್ಟೆಷ್ಟು ಧಾರಣೆ ಇತ್ತೆಂಬುದರ ಮಾಹಿತಿ ನನ್ನ ಹತ್ತಿರ ಇದೆ. ಹತ್ತು ರೂಪಾಯಿ ಹೆಚ್ಚು ಕಡಿಮೆಯಾಗಲಿ, ನಾನು ಮೊದಲೇ ಹೇಳಿದಂತೆ, minor mistakes ಇದ್ದರೆ, ಒಪ್ಪಿಕೊಳ್ಳೋಣ. ಆದರೆ, ಇಲ್ಲಿ ಆಗಿರುವುದು major mistakes. ಸಕ್ಕರೆ ಧಾರಣೆ 1,173 ರೂಪಾಯಿಗಳಿದ್ದರೆ 990 ರೂಪಾಯಿಗಳಿಗೆ ಮಾರಿದರು. 1 ಲಕ್ಷ 30 ಸಾವಿರ ಕ್ವಿಂಟಾಲ್‌ನಷ್ಟು ಸಕ್ಕರೆ ಮಾರಾಟದಿಂದ ಸುಮಾರು 2 ಕೋಟಿ ರೂಪಾಯಿಗಳಿಗೂ ಹೆಚ್ಚು ನಷ್ಟವುಂಟಾಯಿತು. ಇದರಿಂದ ರೈತರ ಮನೆಗಳು ಹಾಳಾಗದೆ ಉದ್ಧಾರವಾಗುತ್ತದೆಯೇ? ಸಕ್ಕರೆ ಕಾರ್ಖಾನೆಗಳು ಮುಚ್ಚಿವೆ. ಇವೊತ್ತು ಸಕ್ಕರೆ ಕಾರ್ಖಾನೆಗಳು ಸರಿಯಾಗಿ ನಡೆದಿದ್ದರೆ, ಈ ರಾಜ್ಯ ಸರ್ಕಾರಕ್ಕೆ ಒಂದು

ವರ್ಷಕ್ಕೆ ತೆರಿಗೆ ರೂಪದಲ್ಲಿ ಒಂದು ಸಾವಿರ ಕೋಟಿ ರೂಪಾಯಿಯಷ್ಟು ಆದಾಯ ಬರುತ್ತಿತ್ತು. ಅಲ್ಲದೆ, ಇದರಿಂದ ಸುಮಾರು 25 ಲಕ್ಷ ಕಬ್ಬು ಬೆಳೆಗಾರರ ಕುಟುಂಬಕ್ಕೆ ಅನುಕೂಲವಾಗುತ್ತಿತ್ತು. ತನ್ಮೂಲಕ ಕಾರ್ಮಿಕರಿಗೂ ಅನುಕೂಲವಾಗುತ್ತಿತ್ತು. ಸಾಗಾಣಿಕೆದಾರರಿಗೂ ಅನುಕೂಲವಾಗುತ್ತಿತ್ತು. ಇವೆಲ್ಲವನ್ನೂ ಹಾಳು ಮಾಡಿಬಿಟ್ಟರಲ್ಲಾ ಮೊನ್ನೆ ಸೋಮವಾರ 22ನೇ ತಾರೀಖಿನಂದು 'ಪ್ರಜಾವಾಣಿ' ಪತ್ರಿಕೆಯಲ್ಲಿ ವರದಿಯಾಗಿರುವಂತೆ, ' ಕ್ವಿಂಟಾಲ್ ಸಕ್ಕರೆ ಉತ್ಪಾದನೆಗೆ ಎರಡು ಲಕ್ಷ ಖರ್ಚು!' ಇದು ಆಳಂದ ಸಕ್ಕರೆ ಕಾರ್ಖಾನೆಯ ಕರ್ಮದ ಕಥೆ. ಅಲ್ಲಿ sugarcane ಇಲ್ಲ. 10 ಸಾವಿರ, 15 ಸಾವಿರ ಟನ್‌ಗಳಷ್ಟು sugarcane ಇರುತ್ತದೆ. ಅಷ್ಟು ಪ್ರಮಾಣದ ಕಬ್ಬು ಇಟ್ಟುಕೊಂಡು ಇವರು ಫ್ಯಾಕ್ಟರಿಯನ್ನು ಚಾಲೂ ಮಾಡಿದರೆ ಒಂದು ಕ್ವಿಂಟಾಲ್‌ಗೆ ಪರಿವರ್ತನಾ ದರ (conversion cost) ಎರಡು ಲಕ್ಷ ರೂಪಾಯಿಗಳಷ್ಟು ಬಂದರೆ ಸಕ್ಕರೆಯನ್ನು ಏಕೆ ಉತ್ಪಾದಿಸಬೇಕಾಗಿತ್ತು? ಅಕ್ಕಪಕ್ಕದ ಫ್ಯಾಕ್ಟರಿಗಳಿಗೆ ಇವರು ಬೇಕಾದರೆ ಟ್ರಾನ್ಸ್‌ಪೋರ್ಟ್ ಸಬ್ಸಿಡಿ ಕೊಟ್ಟು ಸಾಗಾಣಿಕೆ ಮಾಡಿದ್ದರೆ ಅ ಸಕ್ಕರೆ ಕಾರ್ಖಾನೆ ಉಳಿಯುತ್ತಿರಲಿಲ್ಲವೇ?

ಮಾನ್ಯ ಉಪಾಧ್ಯಕ್ಷರೆ, ಇನ್ನು ಮೆಷಿನರಿ ಮತ್ತು ಸ್ಪೇರ್ ಪಾರ್ಟ್ಸ್‌ಗಳನ್ನು ಖರೀದಿಸುತ್ತಾರೆ. ಇವರು ಬಹುತೇಕ ಕಡೆ ಒರಿಜಿನಲ್ ಖರೀದಿಸುವುದಿಲ್ಲ. ಡೂಪ್ಲಿಕೇಟ್ ಸ್ಪೇರ್ ಪಾರ್ಟ್ಸ್ ಅನ್ನು ಖರೀದಿಸುತ್ತಾರೆ. ಇವೊತ್ತು ಯಾವುದೇ ಸಕ್ಕರೆ ಕಾರ್ಖಾನೆಗಳಿಗೆ ಹೋಗಿ ನೋಡಬಹುದು. ಅಲ್ಲಿ 5 ಕೋಟಿ, 6 ಕೋಟಿ, 7 ಕೋಟಿ, 10 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಸ್ಪೇರ್ ಪಾರ್ಟ್ಸ್ ಇರುತ್ತದೆ. ಒರಿಜಿನಲ್ ಅಲ್ಲದ, ಈ ರೀತಿ ಖರೀದಿಸಿ ತಂದ ಸ್ಪೇರ್ ಪಾರ್ಟ್ಸ್ ಅನ್ನು ಅಳವಡಿಸಿದ ಒಂದೆರಡು ತಿಂಗಳುಗಳಿಗೇ ಅವು ಹಾಳಾಗುತ್ತದೆ. ಮ್ಯಾನ್ಯುಫ್ಯಾಕ್ಚರರ್ಸ್ ಅಥವಾ ಅಧಿಕೃತ ಡೀಲರುಗಳಿಂದ ಖರೀದಿಸಿದರೆ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್‌ನವರು ಮತ್ತು ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರು ಅದಕ್ಕೆ ಶೇಕಡ 15 ರಿಂದ 16 ರಷ್ಟು ರಿ-ಇಂಬರ್ಸ್ ಮಾಡುತ್ತಾರೆ. ಈಗ 1 ಕೋಟಿ, 2 ಕೋಟಿ ರೂಪಾಯಿಗಳಷ್ಟು ಮೌಲ್ಯದ ಸ್ಪೇರ್ ಪಾರ್ಟ್ಸ್, ಮೆಷಿನರಿಯನ್ನು ಖರೀದಿಸಿದರೆ ಸುಮಾರು 32 ಲಕ್ಷ ರೂಪಾಯಿಗಳು ರಿ-ಇಂಬರ್ಸ್ ಆಗುತ್ತದೆ! ಆದರೆ, ಇವರ್‍ಯಾರೂ ಕೂಡ ಮ್ಯಾನ್ಯುಫ್ಯಾಕ್ಚರರ್ಸ್ ಅವರಿಂದಾಗಲೀ ಅಥವಾ ಅಧಿಕೃತ ಡೀಲರ್‌ಗಳಿಂದಾಗಲೀ ಖರೀದಿಸುವುದಿಲ್ಲ. ರೆಗ್ಯುಲೇಟರಿ ಅಥಾರಿಟಿಯವರು ಏನು ಮಾಡುತ್ತಿದ್ದಾರೆ? ಮೇಲಧಿಕಾರಿಗಳು ಇದಕ್ಕೆ ಒಪ್ಪಿಗೆ ಕೊಟ್ಟು ಏಕೆ ಕುಳಿತಿದ್ದಾರೆ?

ಒಂದು ಕಾರ್ಖಾನೆಯಲ್ಲಿ ಒಂದು ವರ್ಷಕ್ಕೆ ಸುಮಾರು 1 ಕೋಟಿ, 2 ಕೋಟಿ ರೂಪಾಯಿಗಳಷ್ಟು ಸ್ಪೇರ್ ಪಾರ್ಟ್ಸ್ ಖರೀದಿಸಿದರೆ, 16 ಲಕ್ಷ ರೂಪಾಯಿಗಳು ರಿ–ಇಂಬರ್ಸ್ ಆಗುತ್ತದೆ! ಅವರ್‍ಯಾರಿಗೂ ಇದು ಗೊತ್ತಿಲ್ಲವೇ? ಏಕೆ ರಿ–ಇಂಬರ್ಸ್ ಮಾಡಿಸಿಕೊಳ್ಳಲಿಲ್ಲ? ಇದರಿಂದ ಯಾರಿಗೆ ನಷ್ಟವಾಯಿತು? ಅಧಿಕಾರಿಗಳಾದವರು ಇದನ್ನು ಗಮನಿಸಲಿಲ್ಲವೇ? ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು. ಮತ್ತು ಆಗಿರತಕ್ಕ ಲೋಪ–ದೋಷದ ಬಗ್ಗೆ ಕ್ರಮ ಕೈಗೊಳ್ಳಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಇನ್ನು ನಿಪ್ಪಾಣಿ ಸಹಕಾರಿ ಸಕ್ಕರೆ ಕಾರ್ಖಾನೆಯವರು ರೈಲು ಮಾರ್ಗದ ಮೂಲಕ ಅವರೇ ಚಾರ್ಜ್ ಕಟ್ಟಿ ಅಸ್ಸಾಮ್‌ಗೆ ಸಕ್ಕರೆ ಕಳುಹಿಸಿಕೊಟ್ಟರು. ಸುಮಾರು ಹತ್ತು ಲಕ್ಷ ರೂಪಾಯಿಗಳಷ್ಟು ರೈಲ್ವೆ ಸಾಗಾಣಿಕೆ ವೆಚ್ಚವನ್ನು ಇವರೇ ಕಟ್ಟಿದರು! ರೈಲ್ವೆ ಇಲಾಖೆಯವರು ಹಣ ಕಟ್ಟಿಸಿಕೊಳ್ಳದೆ, ಆ ಸಾಮಾನು ಕೊಟ್ಟವರಿಗೆ ಸಕ್ಕರೆಯನ್ನು ರಿಲೀಸ್ ಮಾಡಿದರು. ಸ್ವಲ್ಪ ದಿವಸಗಳಾದ ಬಳಿಕ ಒಂದೂವರೆ ಕೋಟಿ ರೂಪಾಯಿಗಳನ್ನು ಕೊಟ್ಟರು. ರೈಲ್ವೇ ಬೋರ್ಡ್‌ನವರು ಹಣ ಕಟ್ಟಿಸಿಕೊಳ್ಳದೆ ಸಕ್ಕರೆಯನ್ನು ರಿಲೀಸ್ ಮಾಡಿದರೆ ಏನು ಮಾಡಬೇಕಾಗಿತ್ತು? ಸಕ್ಕರೆ ಕಾರ್ಖಾನೆಯವರು ಕೇಸ್ ಹಾಕಬೇಕಾಗಿತ್ತು. ಆರು ತಿಂಗಳೊಳಗೆ ಕೇಸ್ ಹಾಕಬೇಕೆಂಬ ನಿಯಮವಿದೆ. ಒಂದೂವರೆ ವರ್ಷ, ಎರಡು ವರ್ಷಗಳಾದ ಬಳಿಕ ಈಗ ಕೇಸ್ ಹಾಕಿದ್ದಾರೆ! ಇದು ಕೇವಲ ಇದೊಂದೇ ಸಕ್ಕರೆ ಕಾರ್ಖಾನೆಯದ್ದಲ್ಲ. ಉದ್ದರಿ ಕೊಟ್ಟು ಬಿಡುವುದು: ಅನಂತರ ಅವರು ಕೊಟ್ಟಾಗ ತೆಗೆದುಕೊಳ್ಳುವುದು. ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ ಎಂಬಂತಾಗಿದೆ. ಈ ಸರ್ಕಾರಕ್ಕೆ ಹೇಳುವವರು, ಕೇಳುವವರು, ದಿಕ್ಕು–ದಿವಾಳಿ ಇಲ್ಲವೇ? ಏನು ಕತೆ ಇದು? ಯಾವುದನ್ನು ಹೇಳುವುದು? ಇದರ ಕರ್ಮಕತೆಗಳೆಲ್ಲವನ್ನೂ ಹೇಳುತ್ತಾ ಹೋದರೆ, ರಾತ್ರಿ ಕಳೆದು ಬೆಳಗಾಗುತ್ತದಷ್ಟೆ! 2002–2003 ರಲ್ಲಿ ಚಿಕ್ಕೋಡಿಯಲ್ಲಿರುವ ದೂಧ್‌ಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯವರು ಟೆಂಡರ್ ಕರೆಯದೆ ಕಲ್ಕತ್ತಾಗೆ ಕಳುಹಿಸಿದರು. ನಿಪ್ಪಾಣಿ ಸಹಕಾರಿ ಸಕ್ಕರೆ ಕಾರ್ಖಾನೆಯವರು ನಿಯಮ ಉಲ್ಲಂಘಿಸಿ ರೋಡ್ ಮತ್ತು ರೈಲ್ವೆ ಚಾರ್ಜಸ್ ಕಟ್ಟಿದರು. ಆ ದುಡ್ಡು ಕೂಡ ಬರಲಿಲ್ಲ. ಇನ್ನೊಂದು ಪ್ರಕರಣದಲ್ಲಿ ದೂದ್‌ಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯವರು ಸಕ್ಕರೆಯನ್ನು 990 ರೂಪಾಯಿಗಳಿಗೋ, ಎಷ್ಟಕ್ಕೋ ಆರು ತಿಂಗಳವರೆಗೆ ಅದನ್ನು ಅಲ್ಲಿಯೇ ಬಿಟ್ಟು 1,200 ಕ್ಕೋ 1,300 ರೂಪಾಯಿಗಳಿಗೋ ಮಾರಾಟ ಮಾಡಿಕೊಂಡಿದ್ದಾರೆ.

ಇನ್ನು ಗೋಣಿ ಚೀಲ, ಸಲ್ಫರ್, ಸುಣ್ಣ, ಇವೆಲ್ಲದರ ಉತ್ಪಾದನಾ ವೆಚ್ಚ ಪರಿವರ್ತನಾ ದರದ ವೆಚ್ಚ ಹೇಗೆ ಜಾಸ್ತಿಯಾಗುತ್ತದೆಂಬುದನ್ನು ಹೇಳುತ್ತೇನೆ. ಈಗ ಪ್ರತಿ ದಿವಸವೂ Jute Bulletin ಬರುತ್ತಿರುತ್ತದೆ. ಗೋಣಿ ಚೀಲಗಳಿಗೆ ಸಂಬಂಧಿಸಿದಂತೆ ಎಷ್ಟೆಷ್ಟು ದರ ಇರುತ್ತದೆಂದು ಅದರಲ್ಲಿ ತಿಳಿಸಲಾಗಿರುತ್ತದೆ. ಒಂದೇ ತಿಂಗಳಿನಲ್ಲಿ, ಒಂದೇ ದಿವಸ, ಒಂದೇ ಅಂಗಡಿಯಿಂದ ಒಬ್ಬರು ಪ್ರತಿ ಗೋಣಿ ಚೀಲಕ್ಕೆ 25 ರೂಪಾಯಿಗಳಂತೆ ಕೊಂಡುಕೊಂಡಿದ್ದರೆ, ಇನ್ನೊಬ್ಬರು ಅದೇ ತಿಂಗಳಿನಲ್ಲಿ, ಅದೇ ದಿವಸ, ಅದೇ ಅಂಗಡಿಯಲ್ಲಿ 35 ರೂಪಾಯಿಗಳಂತೆ ಒಟ್ಟು 5 ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡಿದ್ದಾರೆ! ಒಂದು ಗೋಣಿ ಚೀಲಕ್ಕೆ 35 ರೂಪಾಯಿಗಳೆಂದರೆ, 5 ಲಕ್ಷ ರೂಪಾಯಿಗಳಿಗೆ ಎಷ್ಟಾಯಿತು? ಖರೀದಿಸಿದ ಗೋಣಿಚೀಲ ಅದೇ ಕ್ವಾಲಿಟಿ ಮತ್ತು ಅದೇ ಸೈಜ್ ಆಗಿದೆ. ಒಂದು ಕಾರ್ಖಾನೆಯವರು ಒಂದು ಗೋಣಿಚೀಲಕ್ಕೆ 25 ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡಿದ್ದರೆ, ಮತ್ತೊಂದು ಕಾರ್ಖಾನೆಯವರು 35 ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡಿದ್ದಾರೆ. ಒಂದು ಗೋಣಿಚೀಲಕ್ಕೆ ಹತ್ತು ರೂಪಾಯಿ ಹೆಚ್ಚಾದರೆ, 50 ಲಕ್ಷ ರೂಪಾಯಿಗಳನ್ನು ಬರೀ ಗೋಣಿಚೀಲದಿಂದಲೇ ಹೊಡೆದರೆ ಸಕ್ಕರೆ ಕಾರ್ಖಾನೆಗಳು ಉದ್ಧಾರವಾಗುತ್ತದೆಯೇ? ರೈತರು ಉದ್ಧಾರವಾಗುತ್ತಾರೆಯೇ? ಆದುದರಿಂದ, ದಯಮಾಡಿ ಮಾನ್ಯ ಸಚಿವರು ಇದನ್ನು ಗಮನಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈ ದಿಕ್ಕಿನಲ್ಲಿ sugarcane development ಗೆ ತಾವು ಹೆಚ್ಚಿನ ಆದ್ಯತೆ ನೀಡಬೇಕು. ಮತ್ತು ಪರಿವರ್ತನಾ ಬೆಲೆ ಏನು ಹೆಚ್ಚಾಗುತ್ತಿದೆ, ಅದನ್ನು ನಿಯಂತ್ರಿಸುವುದಕ್ಕೆ ಕ್ರಮ ಕೈಗೊಳ್ಳಬೇಕು.

ಇನ್ನೊಂದು ವಿಷಯವೇನೆಂದರೆ, ಅವರು export order ತೆಗೆದುಕೊಳ್ಳುತ್ತಾರೆ. export order ಎಂದು ಗೋಣಿಚೀಲದ ತುಂಬಾ ಸಕ್ಕರೆ ತುಂಬುತ್ತಾರೆ. ಇವರದೆಲ್ಲಾ ದೊಗಲೆ ಗೋಣಿಚೀಲದ ಜೇಬು. ಅವರು ಸಾಯುವಾಗ ಅದೆಲ್ಲವನ್ನೂ ಕೂಡಿಸಿಕೊಳ್ಳುತ್ತಾರೋ? ಏನು ಮಾಡುತ್ತಾರೋ? ಇದರ ಬಗ್ಗೆ ನಾನು ಯಾವ ಪದಗಳನ್ನು ಬಳಸಬೇಕು? ಏಕೆಂದರೆ, ಇದನ್ನೆಲ್ಲಾ ನೋಡುತ್ತಿದ್ದರೆ, ಹೊಟ್ಟೆಯಲ್ಲಿ ಬೆಂಕಿ ಉರಿಯುತ್ತದೆ. ಈ ಅನ್ಯಾಯವನ್ನು ಸಹಿಸಿಕೊಂಡು ನಾವು ಕುಳಿತರೆ ಜನರು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನಾವೆಲ್ಲರೂ ಬಹಳ ತೀಕ್ಷ್ಣವಾಗಿ ಇಂತಹುದರ ಕಡೆ ಗಮನಹರಿಸಬೇಕಾಗಿದೆ

ಎಂಬ ಮಾತನ್ನು ಹೇಳುತ್ತೇನೆ. ಈಗ export order ಎಂದು ಬಂದರೆಗೆ ಅದು ಹೋಗುತ್ತಿಲ್ಲ. ಎಕ್ಸ್‌ಪೋರ್ಟ್‌ಗೆ ಕ್ವಾಲಿಟಿ ಚೆನ್ನಾಗಿಲ್ಲವೆಂಬ ಬಗ್ಗೆ ಅಲ್ಲಿಯೇ ಒಂದು ಸರ್ಟಿಫಿಕೇಟ್. ರಿಜೆಕ್ಟ್ ಮಾಡಿದ್ದೇವೆ ಎಂದು. ಇಲ್ಲಿ 1,250 ರೂಪಾಯಿಗಳಿದ್ದರೆ, ಅಲ್ಲಿ 900 ರೂಪಾಯಿಗಳಿಗೆ ಮಾರಾಟ ಮಾಡುವುದು! ಇದನ್ನೆಲ್ಲಾ ಹೇಳುತ್ತಾ ಹೋದರೆ, ಇದೊಂದು ದೊಡ್ಡ ಕರ್ಮಕಾಂಡದ ಕತೆಯಾಗುತ್ತದೆ. ಎದುರುಗಡೆ ಸಿಕ್ಕಿಬಿಟ್ಟರೆ ಒಂದೊಂದು ಸಾರಿ ಅಷ್ಟೊಂದು ರೋಷ ಬರುತ್ತದೆ. ಇಷ್ಟೊಂದು ದೋಚುತ್ತಾರಾ? ಹಗಲು ದರೋಡೆ. ಎಲ್ಲಾದರೂ ಉಂಟಾ ಇದು? ಇದನ್ನು ಸಹಿಸಿಕೊಂಡು ನಾವು ಕುಳಿತುಕೊಳ್ಳಬೇಕಾ? ನನಗೆ ಇನ್ನೂ ಕೂಡ ಮಾನ್ಯ ದೇಶಪಾಂಡೆಯವರಲ್ಲಿ ವಿಶ್ವಾಸ ಇದೆ. ಇಲ್ಲ ಅವರು ಇದಕ್ಕೆ ಖಂಡಿತ ಕಡಿವಾಣ ಹಾಕುತ್ತಾರೆ. ಆಗಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸುವುದು ಮಾತ್ರವಲ್ಲ. ಯಾರು ಈ ಲೋಪದೋಷಕ್ಕೆ ಕಾರಣಕರ್ತರಾಗಿದ್ದಾರೆ; ಮೇಲಿಂದ ಶುರು ಆಗಬೇಕು, ಕೆಳಗಿನಿಂದ ಅಲ್ಲ. ಕಾರಣಕರ್ತರನ್ನು ನೀವು ಬಲಿ ಹಾಕಿದರೆ ಒಂದು ದೊಡ್ಡ ಸಂದೇಶ ಕೊಟ್ಟಹಾಗೆ ಆಗುತ್ತದೆ. ಈ ನೂರು ವರ್ಷ ತುಂಬಿದ ಸಹಕಾರಿ ಆಂಧೋಳನದ ಈ ಸುಸಂದರ್ಭದಲ್ಲಿ ಒಂದು ಚೈತನ್ಯವನ್ನು, ಹೊಸ ಮರುಚೈತನ್ಯವನ್ನು ಸಹಕಾರಿ ಆಂದೋಲನಕ್ಕೆ ನೀಡಿದ ಹಾಗೆ ಆಗುತ್ತದೆ. ಆ ದಿಕ್ಕಿನಲ್ಲಿ ತಾವು ದಯವಿಟ್ಟು ಕ್ರಮ ಕೈಗೊಳ್ಳಬೇಕು ಎಂಬ ಮಾತನ್ನು ಹೇಳುತ್ತೇನೆ. ಕಡಿಮೆದರದಲ್ಲಿ ಸಕ್ಕರೆ ಮತ್ತು ಕಾಕಂಬಿಯನ್ನು ಏನು ಮಾರಾಟ ಮಾಡಿದ್ದಾರೆ. ಅದರ ಬಗ್ಗೆನೂ ಕೂಡ ತಾವು ತನಿಖೆ ಮಾಡಿ ಕ್ರಮ ಕೈಗೊಳ್ಳಬೇಕು. ಮತ್ತೆ ರೋಡ್ ಡೆವಲಪ್‌ಮೆಂಟ್ ಸೆಸ್ ಏನು ಇತ್ತು, ಇದು ಸಂಪೂರ್ಣ ದುರುಪಯೋಗ ಆಗಿದೆ.

ಶ್ರೀ ಎ.ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ಹೇಳಿದ್ದು ಎಲ್ಲಾ ವಿಚಾರಗಳೂ ಕೂಡ ಸರಿಯಾಗಿ ಇರಬಹುದು. ಆದರೆ ರೋಡ್ ಡೆವಲಪ್‌ಮೆಂಟ್ ವಿಚಾರದಲ್ಲಿ ನಾನು ಒಂದು ಕ್ಲಾರಿಫಿಕೇಷನ್ ಕೊಡಬೇಕೆಂದು ಎದ್ದು ನಿಂತಿದ್ದೇನೆ. 2000–01, 2001–02 ರಲ್ಲಿ ಆ ರೋಡ್ ಡೆವಲಪ್‌ಮೆಂಟ್ ಸೆಸ್ ಏನು ಪಿಡಬ್ಲ್ಯುಡಿ ಖಾತೆಯಲ್ಲಿ ಮುಳುಗಿ ಹೋಗಿತ್ತು, ಅದನ್ನು ಸೆಪರೇಟಾಗಿ ಒಂದು ಖಾತೆ ಎಂದು ಹೇಳಿ ನಾವು ಫೈನಾನ್ಸ್ ಡಿಪಾರ್ಟ್‌ಮೆಂಟ್ ಕಡೆಯಿಂದ ತಯಾರು ಮಾಡಿಸಿ ಅದಕ್ಕೆ ಹೆಡ್ ಆಫ್ ಅಕೌಂಟ್ ಕೂಡ ಬೇರೆ ಕೊಟ್ಟು, ನನ್ನ ನೆನಪಿನ ಪ್ರಕಾರ ಆ ಎರಡು ವರ್ಷಗಳಲ್ಲಿ ರೋಡ್ ಡೆವಲಪ್‌ಮೆಂಟ್‌ಗೆ ಏನು ಹಣ ಇತ್ತು, ಅದನ್ನು ಸಂಪೂರ್ಣವಾಗಿ ಆಯಾಯ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು

ಮತ್ತು ಸಂಬಂಧಪಟ್ಟ ಅಧಿಕಾರಿಗಳಿಂದ ಪಟ್ಟಿ ತಂದು ಆ ಕೆಲಸಗಳನ್ನು ನಾವು ಜಾರಿ ಮಾಡಿದ್ದೇವೆ. ಶಾಸಕರೂ ಕೂಡ ನನ್ನ ಕೈಗೇ ಕೊಟ್ಟ ಪಟ್ಟಿಯನ್ನು ಅಪ್ರೂವ್ ಮಾಡಿ ವರ್ಷದಲ್ಲಿ ಜಾರಿ ಮಾಡಿಸಿದ್ದೇನೆ. ಅಷ್ಟು ಮಾತ್ರ ಹೇಳುತ್ತೇನೆ. ಒಟ್ಟಾರೆ ಎಲ್ಲಾ ವಿಚಾರಗಳು ಸನ್ಮಾನ್ಯ ರಾಮಸ್ವಾಮಿಯವರು ಹೇಳಿರುವ ಪೈಕಿ ಈ ರೋಡ್ ಡೆವಲಪಮೆಂಟ್ ಸೆಸ್. ಅದಕ್ಕೆ ಹೆಡ್ ಆಫ್ ಅಕೌಂಟೇ ಇರಲಿಲ್ಲ. ಇಷ್ಟು ವರ್ಷಗಳ ಕಾಲ ಸರ್ಕಾರದಲ್ಲಿ ಇರಲಿಲ್ಲ. ಸೆಪರೇಟ್ ಹೆಡ್ ಆಫ್ ಅಕೌಂಟ್ ಕೊಟ್ಟು ಆಪರೇಟ್ ಮಾಡಿ ಆ ದುಡ್ಡು ಅವರು ಅಂದುಕೊಂಡ ಹಾಗೆ ಸಂಪೂರ್ಣವಾಗಿ ದುರುಪಯೋಗ ಆಗಿಲ್ಲ ಎಂದು ಹೇಳಿ ಆ ಒಂದು ಅಂಶದ ಬಗ್ಗೆ ಮಾತ್ರ ನಾನು ಈ ವಿಚಾರವನ್ನು ಸದನದ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಸಿ. ತಮ್ಮಣ್ಣ (ಮದ್ದೂರು) : ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ರಾಮಸ್ವಾಮಿಯವರು ಎತ್ತಿದಂತಹ ರೋಡ್ ಡೆವಲಪ್‌ಮೆಂಟ್ ಸೆಸ್ ಬಗ್ಗೆ ಹೇಳುವುದಾದರೆ 1999ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ಹಿಂದೆ ಈ ಸಕ್ಕರೆ ಕಂಪನಿಯಿಂದ ಒಂದು ಟನ್‌ಗೆ ಹತ್ತು ರೂಪಾಯಿ ಹಾಗೆ ಹಿಡಿದಂತಹ ಹಣದಲ್ಲಿ ಆ ಸಕ್ಕರೆ ಕಂಪನಿಯ ವ್ಯಾಪ್ತಿಗೆ ಬರತಕ್ಕಂಥ ಪ್ರದೇಶದ ರಸ್ತೆಗಳ ಅಭಿವೃದ್ಧಿಗೆ ಕೊಡುತ್ತಿದ್ದಂತಹ ಹಣವನ್ನು ಕಾಮನ್ ಪೂಲ್‌ಗೆ ಹಾಕಿಕೊಳ್ಳುತ್ತಿದ್ದರು. ಅದನ್ನು ನಾನೆ ಪ್ರಥಮ ಬಾರಿಗೆ ಸ್ಟಾರ್ಟ್ ಮಾಡಿದವನು. ಆಯಾಯ ಸಕ್ಕರೆ ಕಂಪನಿಯ ವ್ಯಾಪ್ತಿಗೇ ಬಿಡುಗಡೆ ಮಾಡಬೇಕೆಂದು ಸುಮಾರು ಒಂದು ವರ್ಷ ಹೋರಾಟ ಮಾಡಿದ ಮೇಲೆ ಅದಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮತಿಯನ್ನು ಮಾಡಿ, ಆಯಾಯ ಕ್ಷೇತ್ರದ ಶಾಸಕರುಗಳು, ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರು ಯಾರೇ ಇರಬಹುದು, ಅವರು ಸದಸ್ಯರು. ಸಕ್ಕರೆ ಕಂಪನಿಯಿಂದ ಒಬ್ಬರು ಸದಸ್ಯರು ಇದ್ದು, ಆಕ್ಷನ್ ಪ್ಲಾನ್‌ನ ಪ್ರಿಪೇರ್ ಮಾಡಿ ಅದರ ಪ್ರಕಾರ ಕೆಲಸವನ್ನು ಮಾಡುವಂತಹ ಕೆಲಸ ಆಗಿದೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಕೂಡ 2000 ರಿಂದ 2004 ರವರೆಗೂ ಕೂಡ ಹಣ ಬಿಡುಗಡೆ ಆಗಿದೆ. ನಾನು ಹಿಂದೆ ಇದ್ದಂತಹ ಕಿರುಗಾವಲು ಕ್ಷೇತ್ರದಲ್ಲಿ ಸುಮಾರು ಈ ಬರ ಪರಿಹಾರ ಕಾಮಗಾರಿಯ ಆಹಾರಧಾನ್ಯವನ್ನು ಕೂಡ ಉಪಯೋಗಿಸಿಕೊಂಡು ಸುಮಾರು 4 ಕೋಟಿ ರೂಪಾಯಿ ವೆಚ್ಚದಲ್ಲಿ ರಸ್ತೆಗಳ ಅಭಿವೃದ್ಧಿಯನ್ನು ಆ ಕ್ಷೇತ್ರದಲ್ಲಿ ಮಾಡಿದ್ದೇನೆ. ಆದರೆ ಮಧ್ಯೆ ಈಗ ಎರಡು ವರ್ಷದಿಂದ ಈಚೆಗೆ 10 ರೂಪಾಯಿ ಇದ್ದದ್ದನ್ನು

ಐದು ರೂಪಾಯಿ ಮಾಡಿದರು. ಅದಕ್ಕೂ ಕೂಡ ನಾವು ಹೋರಾಟ ಮಾಡಿದೆವು. ಇದು ಕಡಿಮೆ ಆಯಿತು. ಹಳ್ಳಿಗಾಡಿನ ರಸ್ತೆಗಳ ಅಭಿವೃದ್ಧಿ ಆಗಬೇಕು. ಅದರಿಂದ ನೀವು ಕಡಿತ ಮಾಡಿದ್ದೀರಿ. ಹತ್ತು ರೂಪಾಯಿಯನ್ನು ಮುಂದುವರಿಸಬೇಕೆಂದು ಕೇಳಿದ್ದೇವೆ. ಅದರ ಬಗ್ಗೆ ಮಾನ್ಯ ರಾಮಸ್ವಾಮಿಯವರು ಧ್ವನಿಗೂಡಿಸಬೇಕು. ಹಿಂದೆ ಇದ್ದಂತೆ ಏನು ಟನ್‌ಗೆ 10 ರೂಪಾಯಿ ಹಿಡಿಯುತ್ತಿದ್ದರು ಅಂದರೆ ರಸ್ತೆಗಳ ಅಭಿವೃದ್ಧಿಗೆ ಕೊಡುತ್ತಿದ್ದರು, ಅದೇ ಹಣವನ್ನು ಐದು ರೂಪಾಯಿಗೆ ಬದಲಾಗಿ ಹತ್ತು ರೂಪಾಯಿ ಕೊಡಬೇಕು. ಇದು ಎಲ್ಲಾ ಕಡೆಯೂ ಇದೆ. ಇದಕ್ಕೆ ಮಧ್ಯೆ ಅಡಚಣೆಯೂ ಬಂತು. ಕೆಲವು ಕೋಆಪರೇಟೀವ್ ಸೊಸೈಟಿಯಲ್ಲಿ ಅಂದರೆ ಸಕ್ಕರೆ ಕಾರ್ಖಾನೆಗಳಲ್ಲಿ..

ಉಪಾಧ್ಯಕ್ಷರು : ಮಾನ್ಯ ತಮ್ಮಣ್ಣನವರೇ, ಅವರು ಮುಗಿಸಲಿ.

ಶ್ರೀ ಡಿ.ಸಿ.ತಮ್ಮಣ್ಣ : ಆದ್ದರಿಂದ ಇದರ ಬಗ್ಗೆ ಕೂಡ ಮಾನ್ಯ ರಾಮಸ್ವಾಮಿ ಅವರು ಧ್ವನಿಗೂಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಈಗ ಧಾರಣೆಯನ್ನು ನಿಗದಿ ಮಾಡುವುದು, ಸಕ್ಕರೆಯನ್ನು ಆಕ್ಷನ್ ಮಾಡುವುದು. ಆ ಸಂಬಂಧಪಟ್ಟ ಕಾರ್ಖಾನೆಯವರು ಮಾಡಬೇಕು. ಇಲ್ಲೆಲ್ಲಾ ಕುಳಿತುಕೊಂಡು ಎಂ.ಎಸ್.ಬಿಲ್ಡಿಂಗ್‌ನಲ್ಲಿ ಅಥವಾ ನಿಮ್ಮ ಶುಗರ್ ಡೈರೆಕ್ಟರೇಟ್‌ನಲ್ಲಿ ಸಕ್ಕರೆಯನ್ನು ಆಕ್ಷನ್ ಮಾಡುವುದಕ್ಕೆ ಆಗುವುದಿಲ್ಲ. ರೇಟನ್ನು ನಿಗದಿ ಮಾಡಲಿಕ್ಕೆ ಆಗುವುದಿಲ್ಲ. ಈ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಸನ್ಮಾನ್ಯ ಸಚಿವರು ಗಮನಿಸಬೇಕು. ಇಲ್ಲೇ ಕುಳಿತುಕೊಂಡು ರೇಟ್ ನಿಗದಿ ಮಾಡಿಬಿಟ್ಟರು. ಅದಕ್ಕೆ ಅಲ್ಲಿಯ ಎಂ.ಡಿ.ಯವರು ಶುಗರ್ ಡೈರೆಕ್ಟರ್‌ಗೆ ಪತ್ರ ಬರೆಯುತ್ತಾರೆ. 25.02.2004 ರಲ್ಲಿ ಪತ್ರ ಬರೆಯುತ್ತಾರೆ. ತಮ್ಮ ಅಧ್ಯಕ್ಷತೆಯಲ್ಲಿ ದಿನಾಂಕ 29.11.2003ರಲ್ಲಿ ನಡೆದ ನಡವಳಿಕೆಯ ತೀರ್ಮಾನದಂತೆ ಸಕ್ಕರೆ ಖರೀದಿದಾರರಿಂದ ಅಫಿಡೆವಿಟ್ ಪಡೆದು ಅದರ ಪ್ರತಿಯನ್ನು ಸಲ್ಲಿಸಲು ನಿರ್ದೇಶಿಸಿರುತ್ತೀರಿ. ಸಕ್ಕರೆ ಖರೀದಿದಾರರು ಕಾರ್ಖಾನೆಯ ಸಂಪರ್ಕವನ್ನು ಇಟ್ಟುಕೊಳ್ಳದೇ ಬಹುತೇಕ ಸಂದರ್ಭಗಳಲ್ಲಿ ತಮ್ಮ ನಿರ್ದೇಶನಾಲಯ ಮತ್ತು ಸರ್ಕಾರದ ಮಟ್ಟದಲ್ಲಿ ವ್ಯವಹರಿಸುತ್ತಿರುವುದರಿಂದ ಕಾರ್ಖಾನೆಗೆ ಅಫಿಡವಿಟ್ ಸಲ್ಲಿಸಿರುವುದಿಲ್ಲ. ಕಾರ್ಖಾನೆ ಗಮನಕ್ಕೇ ಬಂದಿಲ್ಲ. ಯಾವ ಧಾರಣೆಯನ್ನು ಫಿಕ್ಸ್ ಮಾಡಿದರು ಎಷ್ಟು ರೇಟಿಗೆ ಎಂದು ಗಮನಕ್ಕೆ ಬಂದಿಲ್ಲ. ಅವರಿಗೆ ಕೊಡಿ ಎಂದರು ಅವರು ಕೊಟ್ಟರು. ಯಾವ ಧಾರಣೆಯಲ್ಲಿ

ನಿಗದಿ ಮಾಡಿದ್ದೀರಿ? ಏನು? ಅಫಿಡವಿಟ್ ಮಾಡಿಸಿಕೊಳ್ಳಬೇಕು. ಅಗ್ರಿಮೆಂಟ್ ಆಗಬೇಕು. ಅದು ಯಾವುದನ್ನೂ ಅವರು ಮಾಡಿಸಿಕೊಳ್ಳಲೇ ಇಲ್ಲ. ಈ ತರಹ ನಾನು ಏಕೆ ಹೇಳಿದೆ ಎಂದರೆ ಇಲ್ಲಿ ಸರ್ಕಾರದ ಮಟ್ಟದಲ್ಲಿ ಅಂದರೆ ಡೈರೆಕ್ಟರ್ ಮಟ್ಟದಲ್ಲಿ; ನಿಮ್ಮ ಎಂ.ಎಸ್. ಬಿಲ್ಡಿಂಗ್ ಮಟ್ಟದಲ್ಲಿ ಈ ತರಹ ವ್ಯವಹಾರಗಳು ಆಗುತ್ತದೆ ಎನ್ನತಕ್ಕದ್ದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈಗ ಶುಗರ್ ಕಂಟ್ರೋಲ್ ಒಂದು ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಹತ್ತು ಪರ್ಸೆಂಟ್ ಲೆವಿ ಶುಗರ್‌ಗೆ ಹೋಗಲೇ ಬೇಕು. 90 ಪರ್ಸೆಂಟ್ ಶುಗರ್ ಏನು ಇದೆ. ಅದಕ್ಕೆ ರಿಲೀಸ್ ಆರ್ಡರ್ ಇಲ್ಲದೇ ರಿಲೀಸ್ ಮಾಡಲೇ ಬಾರದು. ಅನೇಕ ಸಕ್ಕರೆ ಕಾರ್ಖಾನೆಗಳಲ್ಲಿ ರಿಲೀಸ್ ಆರ್ಡರ್ ಇಲ್ಲದೇ ಮನಸ್ಸಿಗೆ ಬಂದ ರೀತಿಯಲ್ಲಿ ಶುಗರ್ ಅನ್ನು ಮಾರಾಟ ಮಾಡಿದ್ದಾರೆ. ಅಂತಹ ಶುಗರ್ ಫ್ಯಾಕ್ಟರಿಗಳು ಯಾವ್ಯಾವುವು? ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಎಂಬುದನ್ನೂ ತಾವು ತಿಳಿಸಬೇಕು. ಈಗಾಗಲೇ ಹೇಳಿದೆ. ಸ್ಪೇರ್‌ಪಾರ್ಟ್ಸ್‌ನಲ್ಲಿ ಮ್ಯಾನುಫ್ಯಾಕ್ಚರರ್ ಹತ್ತಿರ ಅಥವಾ ಅಧಿಕೃತ ಮಾರಾಟಗಾರರ ಹತ್ತಿರ ತೆಗೆದುಕೊಳ್ಳದೇ ಸೆಂಟ್ರಲ್ ಎಕ್ಸೈಜ್‌ನಿಂದ ನಮಗೇನು ರೀ ಇಂಬರ್ಸ್ ಆಗಬೇಕಾಗಿತ್ತು, 16 ಪರ್ಸೆಂಟ್, ಅದರಿಂದ ನಮ್ಮ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ವಂಚಿತ ಆಗಿದೆ. ಅದಕ್ಕೆ ಯಾರು ಕಾರಣಕರ್ತರು ಎನ್ನತಕ್ಕದ್ದನ್ನು ತಾವು ತಿಳಿಸಬೇಕು. ಮತ್ತೆ ಕಮಿಟಿ ಫಾರ್ ರೀವೈ-ಟಲೈಸೇಷನ್ ಏನು ನಮ್ಮ ರಾಜ್ಯಕ್ಕೆ ವಿಸಿಟ್ ಮಾಡಿತ್ತು, ಅವರನ್ನು ತೆಗೆದುಕೊಂಡು ಹೋಗಿ ಮಹಾರಾಜ ಸೂಟ್‌ನಲ್ಲಿ ಏನು ಇಟ್ಟರು? ಅಕಾಮಡೇಷನ್ ಮಾಡಿದ್ದರು. ಮತ್ತೆ ಎನ್‌ಸಿಡಿಸಿ ಅವರು ಹೇಗೆ ಲೋನನ್ನು ಸ್ಯಾಂಕ್ಷನ್ ಮಾಡಿದರು? ವಯಲೇಟ್ ಮಾಡಿ ಹೇಗೆ ಕಳಿಸಿದರು? ಅದರ ಬಗ್ಗೆ ಉತ್ತರ ಕೊಡಬೇಕು.

ಉಪಾಧ್ಯಕ್ಷರು : ಮಾನ್ಯ ರಾಮಸ್ವಾಮಿಯವರೇ, ಸ್ವಲ್ಪ ಬೇಗ ಮುಗಿಸಿ, ಅವರು ಏನು ಉತ್ತರ ಕೊಡುತ್ತಾರೋ ಕೇಳೋಣ.

ಶ್ರೀ ಎ.ಟಿ.ರಾಮಸ್ವಾಮಿ : ಆಮೇಲೆ ಒಂದು ವಿಷಯ ಇದೆ. ಈಗ ನಂಜನಗೂಡಿನಲ್ಲಿ ಬನ್ನಾರಿ ಅಮ್ಮನ್ ಎಂಬ ಸಕ್ಕರೆ ಫ್ಯಾಕ್ಟರಿ ಇಧೆ. ಒಂದೇ ವರ್ಷದಲ್ಲಿ 2003-04 ರಲ್ಲಿ ಅವರ ಡಿಕ್ಲೇರ್ಡ್ ನೆಟ್ ಫ್ರಾಫಿಟ್, ಇನ್ನು ಎಷ್ಟನ್ನು ಡಿಕ್ಲೇರ್ ಮಾಡಿಲ್ಲವೋ ಗೊತ್ತಿಲ್ಲ. ಡಿಕ್ಲೇರ್ಡ್ ನೆಟ್ ಪ್ರಾಫಿಟ್ ಒಂದೇ ಒಂದು ವರ್ಷಕ್ಕೆ ಖಾಸಗಿ ಸಕ್ಕರೆ ಕಾರ್ಖಾನೆ 30 ಕೋಟಿ ರೂಪಾಯಿ ನಿವ್ವಳ ಲಾಭವನ್ನು ತೋರಿಸಿದ್ದಾರೆ. 30 ಕೋಟಿ ರೂ. ಅಧಿಕೃತವಾಗಿ ನಿವ್ವಳ ಲಾಭವನ್ನು

ತೋರಿಸಿರುವುದು. ಆದರೆ ನಮ್ಮ ಸಹಕಾರಿ ಸಕ್ಕರೆ ಕಾರ್ಖಾನೆಗಳು ಬಹುತೇಕ ಎಲ್ಲಾ 21 ಸಹಕಾರಿ ಸಕ್ಕರೆ ಕಾರ್ಖಾನೆಗಳು ಕೂಡ ನಷ್ಟದಲ್ಲಿ ನಡೆಯುತ್ತಿದ್ದಾವೆ. ಆಡಿಟ್‌ನಲ್ಲಿ ಏನಾದರೂ ಮೇಜರ್ ಅಬ್ಜೆಕ್ಷನ್ ಬಂದರೂ ಕೂಡ ಅದರ ಕಡೆಗೆ ಇಲಾಖೆಯ ಅಧಿಕಾರಿಗಳು, ಮೇಲಧಿಕಾರಿಗಳು ಗಮನ ಹರಿಸುತ್ತಿಲ್ಲ. ಅವರೂ ಕೂಡ ಶಾಮೀಲಾಗಿದ್ದಾರೆ. ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಬೇಕು. ಈ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಒಂದು ಕಾಯಕಲ್ಪವನ್ನು ತಾವು ದಯಮಾಡಿ ನೀಡಬೇಕು ಸರ್ಕಾರ ಎಂದು ತಮ್ಮ ಮೂಲಕ ಸರ್ಕಾರವನ್ನು ನಾನು ಕೋರುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸ್ನೇಹಿತರಾದಂತಹ ರಾಮಸ್ವಾಮಿಯವರು ಹಲವಾರು ಸಕ್ಕರೆ ಕಾರ್ಖಾನೆಯಲ್ಲಿ ನಡೆದಿರುವ ವ್ಯವಹಾರದ ಬಗ್ಗೆ ಸರ್ಕಾರದ ಮತ್ತು ಸದನದ ಗಮನವನ್ನು ಸೆಳೆದಿದ್ದಾರೆ. ನಾನು ಸಹಕಾರಿ ಚಳುವಳಿಯಲ್ಲಿ 22 ವರ್ಷದ ಹಿಂದೆ ಇದ್ದೆ. ಲ್ಯಾಂಡ್ ಬ್ಯಾಂಕಿನ ಅಧ್ಯಕ್ಷನಾಗಿ ಕೆಲಸ ಮಾಡಿದ್ದೆ. ಆದರೆ ಕಳೆದ 20,22 ವರ್ಷದಲ್ಲಿ ಈ ಇಲಾಖೆ ಮತ್ತು ನನ್ನ ಸಂಪರ್ಕ ಬಹಳ ಕಡಿಮೆ. ಆದರೆ ಸಚಿವ ಸಂಪುಟದ ಸದಸ್ಯನಾಗಿ ಹಲವಾರು ಬಾರಿ ಇವರ ಪ್ರಸ್ತಾವನೆ ಬಂದಾಗ ಕೆಲವು ಸಾರಿ ನಮ್ಮದೇ ಆದ ವಿಚಾರಗಳನ್ನು ನಾವು ಹೇಳಿದ್ದೇವೆ. ಸಕ್ಕರೆ ಕಾರ್ಖಾನೆಗಳು, ಅದರಲ್ಲಿ ಸಹಕಾರಿ ಕ್ಷೇತ್ರಗಳು, ಅವು ರೈತರ ಕೈಗಾರಿಕೆಗಳು, ರೈತರ ಕಾರ್ಖಾನೆಗಳು. ರೈತರೇನು ಕಷ್ಟ ಪಟ್ಟು ಕಬ್ಬು ಬೆಳಸುತ್ತಾರೆ, ಆ ಕಬ್ಬು ಖರೀದಿ ಮಾಡಿ, ರೈತರಿಗೆ ಯೋಗ್ಯವಾದ ದರ ಕೊಡಬೇಕು. ಸರಿ ಸಮಯದಲ್ಲಿ ಅವನಿಗೆ ಹಣ ಸಿಗಬೇಕು. ಬೇರೆ ಎಲ್ಲಾ ಸೌಕರ್ಯಗಳು, ಅದು ಗೊಬ್ಬರ ಆಗಲಿ, ಪೆಸ್ಟಿಸೈಡ್ಸ್ ಆಗಲಿ, ರೈತರಿಗೆ ಒಂದು ಸಿಂಗಲ್ ವಿಂಡೋ ಏಜೆನ್ಸಿ ಆಗಿ ಸಹಾಯ ಆಗಬೇಕು. ಈ ಉದ್ದೇಶದಿಂದ ಈ ಹಲವಾರು ಕೈಗಾರಿಕೆಗಳು ಪ್ರಾರಂಭವಾಗಿವೆ. ಸಹಕಾರಿ ಚಳವಳಿಯ ಮುಖಾಂತರ, ಅವರು ಹೇಳಿದ ಹಾಗೆ ನೂರನೇ ವರ್ಷದಲ್ಲಿ ನಾವು ಇದ್ದೇವೆ, ಇದರಲ್ಲಿ ಸಾಕಷ್ಟು ಒಳ್ಳೆಯ ಕೆಲಸಗಳೂ ಆಗಿವೆ. ಹಸಿರು ಕ್ರಾಂತಿ ಆಗಲಿಕ್ಕೆ ಸಹಕಾರಿ ಚಳವಳಿಯೇ ಕಾರಣ. ಇವತ್ತು ನಮ್ಮ ಕರ್ನಾಟಕದಲ್ಲಿ ನಮ್ಮ ಇನ್ಸ್ಟಿಟ್ಯೂಷನ್ ಸ್ವಲ್ಪ ಅನಾರೋಗ್ಯವಾಗಿ ಸಾಲ ಕೊಡುವುದು ಕಡಿಮೆಯಾಯಿತು. ಈ ವರ್ಷ ಜನವರಿ 2005ರ ತನಕ 1100 ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟಿದ್ದೇವೆ. 2005–06 ಕ್ಕೆ ತಾವು ರೂರಲ್ ಕ್ರೆಡಿಟ್ ಡಬಲ್ ಮಾಡಿ ಕೇಂದ್ರ ಎಂದು ಸರ್ಕಾರ ಹೇಳುತ್ತಿದೆ. ಎಲ್ಲಿಯತನಕ

ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿ ಯಾಗುವುದಿಲ್ಲವೋ, ಎಲ್ಲಿಯತನಕ ರೈತರು, ಕೃಷಿ ಕಾರ್ಮಿಕರು ಆರ್ಥಿಕವಾಗಿ ಸಂಪನ್ನರು ಆಗುವುದಿಲ್ಲವೋ, ಆ ತನಕ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಿಲ್ಲ. ಈ ವಿಚಾರದಿಂದ ಇವತ್ತು ಕೇಂದ್ರ ಸರ್ಕಾರ ಆ ವಿಚಾರ ಹೇಳಿದೆ. ಹಾಗಾಗಿ ಇವತ್ತು ಕೈಗಾರಿಕಾ ರಂಗದಲ್ಲಿ ಇರಬಹುದು, ಶಿಕ್ಷಣ ರಂಗದಲ್ಲಿ ಇರಬಹುದು, ಸಾಮಾಜಿಕ ನ್ಯಾಯ ಇರಬಹುದು, ಇದರಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ಒಳ್ಳೆಯ ಕೆಲಸಗಳಾಗಿವೆ. ಆದರೆ ನಾನು ಬಹಳ ಪ್ರಾಮಾಣಿಕವಾಗಿ, ಅಷ್ಟೇ ವಿನಯದಿಂದ ಹೇಳುತ್ತಿದ್ದೇನೆ. ಕಳೆದ ಕೆಲವು ವರ್ಷಗಳಲ್ಲಿ ಸಹಕಾರಿ ಚಳವಳಿ ತನ್ನ ದಾರಿಯನ್ನು ತಪ್ಪಿದೆ ಎಂದು ನಾನು ಭಾವಿಸುತ್ತೇನೆ. ಪಾರದರ್ಶಕತೆ ದಿನೇದಿನೇ ಕಡಿಮೆಯಾಗುತ್ತಿದೆ. Financial discipline ಕಡಿಮೆಯಾಗುತ್ತಿದೆ. ಹಾಗಾಗಿ ಮಾನ್ಯ ರಾಮಸ್ವಾಮಿಯವರು ಹೇಳಿದ ಹಾಗೆ ಹಲವಾರು ಸಮಸ್ಯೆಗಳು ನಿರ್ಮಾಣವಾಗಿವೆ. ಮಾನ್ಯ ರಾಮಸ್ವಾಮಿಯವರು ಇವತ್ತೇನು ವಿಚಾರಗಳನ್ನು ಪ್ರಸ್ತಾಪ ಮಾಡಿದರೋ, ಅದರ ಬಗ್ಗೆ ನಿಜವಾಗಿಯೂ ಪ್ರಾಮಾಣಿಕವಾಗಿ ಹೇಳಬೇಕಾದರೆ, ಅದರ ಬಗ್ಗೆ ನನ್ನ ಹತ್ತಿರ ಇವತ್ತು ಮಾಹಿತಿ ಇಲ್ಲ. ಕಳೆದ ಮೂರು ತಿಂಗಳಿನಿಂದ ನಾನು ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ. ಒಂದು ವೇಳೆ ಅವರು ಮುಂಚಿತವಾಗಿಯೇ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದರೆ, ಇವತ್ತಿನೊಳಗಾಗಿ ನಾನು ಅದರ ಬಗ್ಗೆ ಕ್ರಮತಗೆದುಕೊಂಡು, ಇಂತಹ ಕ್ರಮ ತೆಗೆದುಕೊಂಡಿದ್ದೇನೆ ಎಂದು ಅವರಿಗೆ ಹೇಳಲಿಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಒಂದು ಮಾತು ನಿಜ. ಇವತ್ತು ಎಲ್ಲಾ ಸರಿ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾರ್, ನಾವು..........

ಶ್ರೀ ಆರ್. ವಿ. ದೇಶಪಾಂಡೆ : ನಾನು ಉತ್ತರ ಕೊಟ್ಟು ಮುಗಿಸುತ್ತೇನೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಕ್ಕೆ ನಾನು ಉತ್ತರ ಕೊಡಬೇಕಲ್ಲವೇ?

ಉಪಾಧ್ಯಕ್ಷರು : ಅವರು ಬೇಗ ಮುಗಿಸುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಯಡಿಯೂರಪ್ಪನವರೆ, ನಾನು ಬೇಗನೆ ಉತ್ತರ ಕೊಟ್ಟು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಒಳ್ಳೆಯತನ......

ಶ್ರೀ ಆರ್.ವಿ. ದೇಶಪಾಂಡೆ : ನಾನಿಲ್ಲಿ ಉತ್ತರ ಕೊಡಬೇಕಲ್ಲಾ...........

ಶ್ರೀ ಬಿ.ಎಸ್. ಯಡಿಯೂರಪ್ಪ ...... ಇಲ್ಲ ಸಾರ್, I am very sorry......

ಶ್ರೀ ಆರ್.ವಿ. ದೇಶಪಾಂಡೆ : ಇವತ್ತು ಸಕ್ಕರೆ ಸಹಕಾರಿ ರಂಗದಲ್ಲಿ 21........

ಶ್ರೀ ಬಿ.ಎಸ್. ಯಡಿಯೂರಪ್ಪ : ಇದಾದ ಮೇಲೆ ನಮ್ಮದನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರಿ ಎನ್ನುವುದಾದರೆ, ನಾವು ಈ ಸದನದಲ್ಲಿ ಪ್ರತಿಪಕ್ಷದಲ್ಲಿ ಕುಳಿತುಕೊಳ್ಳತಕ್ಕಂಥ ಅಗತ್ಯ ಇಲ್ಲ ಸಾರ್. No, Sir. I am sorry ......

(ಗೊಂದಲ)

ಉಪಾಧ್ಯಕ್ಷರು : ಒಂದೆರಡು ನಿಮಿಷಗಳಲ್ಲಿ ಅವರ ಉತ್ತರ ಮುಗಿಸಿಬಿಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : .... ನೀವು ಎಲ್ಲಕ್ಕೂ ಟೈಮ್ ಅನ್ನು ಫಿಕ್ಸ್ ಮಾಡಬೇಕಾಗುತ್ತದೆ. ಕೊನೆಯ ದಿವಸ ಪ್ರಮುಖವಾದಂತಹ ಅನೇಕ ಅಂಶಗಳನ್ನು ಪ್ರಸ್ತಾಪ ಮಾಡಲಿಕ್ಕೆ ನಾವು ಇಲ್ಲಿ ಕುಳಿತಿದ್ದೇವೆ. ನೀವು ಸಮಯ ನಿಗದಿ ಮಾಡಬೇಕಲ್ಲವೇ?........

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ....ನಾವು ನಿಮ್ಮನ್ನು ಕೇಳಿದಾಗ 5 ಗಂಟೆಗೆ ಪ್ರಸ್ತಾವನೆ ಮಾಡಬಹುದು ಎಂದು ಹೇಳಿದ್ದೀರಿ. ಈಗ 6.10 ಗಂಟೆಯಾಗಿದೆ ಸಾರ್. 5 ಗಂಟೆಗೆ ಪ್ರಸ್ತಾಪ ಮಾಡಬಹುದು ಎಂದು ತಾವೇ ಅನುಮತಿ ಕೊಟ್ಟಿದ್ದೀರಿ............

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಆಂಧ್ರ ಪ್ರದೇಶದ......... ನೋಡಿ ಸಾರ್,ನಾನು ಹೇಳುತ್ತೇನೆ, ಕೇಳಿ.............

ಉಪಾಧ್ಯಕ್ಷರು : ಒಂದೆರಡು ನಿಮಿಷಗಳಲ್ಲಿಯೇ ಮುಗಿಸಿ ಬಿಡುತ್ತಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ...... ಇಲ್ಲಿ ಯಾವುದೇ ಪ್ರಮುಖವಾದಂತಹ ವಿಷಯಕ್ಕೆ ಸಮಯ ಫಿಕ್ಸ್ ಮಾಡುತ್ತಿಲ್ಲ.

ಉಪಾಧ್ಯಕ್ಷರು : ಎ.ಟಿ. ರಾಮಸ್ವಾಮಿಯವರು ಸಬ್ಜೆಕ್ಟ್ ಎತ್ತಿಕೊಂಡ ಮೇಲೆ.........

ಶ್ರೀ ಬಿ.ಎಸ್. ಯಡಿಯೂರಪ್ಪ : .... ಪ್ರಮುಖವಾದ ವಿಷಯಗಳಿಗೆ ನೀವು ಸಮಯ ನಿಗದಿ ಮಾಡಬೇಕಲ್ಲಾ?

ಉಪಾಧ್ಯಕ್ಷರು : .... ಅವರು ಸಬ್ಜೆಕ್ಟ್ ಪ್ರಸ್ತಾಪ ಮಾಡಿದಾಗ ನೀವೆಲ್ಲರೂ ಅದಕ್ಕೆ ಸಂತೋಷ ಪಟ್ಟಿರಿ......

ಶ್ರೀ ಬಿ.ಎಸ್. ಯಡಿಯೂರಪ್ಪ : ಹತ್ತು ಸಲ ನಾನು ನಿಂತುಕೊಂಡು ಕೇಳಿಕೊಂಡಿದ್ದೇನೆ...

ಉಪಾಧ್ಯಕ್ಷರು : ಆಯಿತು, ಇನ್ನು ಎರಡೇ ಎರಡು ನಿಮಿಷಗಳಲ್ಲಿ ಅವರು ಮುಗಿಸುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ...... ಈ ರಾಜ್ಯದ ಜನತೆಯ ಜ್ವಲಂತ ಸಮಸ್ಯೆ ಪ್ರಸ್ತಾಪಿಸಬೇಕಾಗಿದೆ. ನಾಳೆ ಒಂದು ದಿವಸ ಅಧಿವೇಶನ ಮುಂದುವರೆಸುವುದಕ್ಕೆ ಒಪ್ಪಿಕೊಳ್ಳಿ. ನಾವು ಅದಕ್ಕೆ ರೆಡಿ ಇದ್ದೇವೆ.

ಉಪಾಧ್ಯಕ್ಷರು : ಇನ್ನು ಎರಡು ನಿಮಿಷಗಳಲ್ಲಿ ಅವರ ಉತ್ತರ ಮುಗಿಯುತ್ತದೆ. ನಂತರ ತಾವು ಮಾತನಾಡುವಿರಂತೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ...... ನಮ್ಮ ಪ್ರಮುಖವಾದ ವಿಷಯ ಪ್ರಸ್ತಾಪಿಸಲು ಹತ್ತು ಸಲ ಕೇಳಿದ್ದೇವೆ. ಕೊಠಡಿಯೊಳಗೆ ಬಂದು ಸ್ಪೀಕರ್ ಹತ್ತಿರ ಮಾತನಾಡಿದ ಮೇಲೆ, ನೀವು ಅದಕ್ಕೊಂದು ಸಮಯ ನಿಗದಿ ಮಾಡಬೇಕಲ್ಲಾ ?

ಉಪಾಧ್ಯಕ್ಷರು : ಈಗ ಅವರು ಉತ್ತರ ಕೊಡುವುದು ಬೇಡವೇ? ಒಂದೆರಡು ನಿಮಿಷಗಳಲ್ಲಿ ಮುಗಿಸುತ್ತಾರೆ. ಇಷ್ಟೊತ್ತಿಗೆ ಉತ್ತರ ನೀಡಿ ಮುಗಿಸುತ್ತಿದ್ದರು. ಸುಮ್ಮನೆ ಏಕೆ ಅಡ್ಡಿ ಪಡಿಸಿದಿರಿ? ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : .... ಅವರು ಮಾತನಾಡುತ್ತಿರುವುದು ಬಹಳ ಮುಖ್ಯವಾದ ವಿಷಯವಲ್ಲವೆಂದು ನಾನು ಹೇಳುತ್ತಿಲ್ಲ. ನಾಳೆಗೆ ಅಧಿವೇಶನ ಮುಂದುವರೆಸಿ ಎಂದು ನಾನು ಒತ್ತಾಯ ಮಾಡುತ್ತಿದ್ದೇನಷ್ಟೆ. ಮಾನ್ಯ ಉಪಾಧ್ಯಕ್ಷರೆ, ನಿಮ್ಮನ್ನು ನಾವು ವಿನಂತಿ ಮಾಡುತ್ತಿರುವುದು ಏನೆಂದರೆ, ನಿಮ್ಮ ಬಗ್ಗೆ ನನಗೆ ಗೌರವ ಇದೆ. ಪ್ರತಿಪಕ್ಷದ ನಾಯಕನಾಗಿ ನಾನು ಆ ಪೀಠಕ್ಕೆ ಗೌರವ ಕೊಡಬೇಕು.

ಉಪಾಧ್ಯಕ್ಷರು : ಒಂದೆರಡು ನಿಮಿಷಗಳಲ್ಲಿ ಮುಗಿಸಿ ಬಿಡುತ್ತಾರೆ. ಇನ್ನೇನು ಆಗಿ ಹೋಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೆ ಸಮಯದ ಇತಿಮಿತಿ ಇದೆ.

ಉಪಾಧ್ಯಕ್ಷರು : ಸಮಯಗಳನ್ನು ಇಲ್ಲಿ ಯಾರು ಪಾಲನೆ ಮಾಡುತ್ತಾರೆ ಹೇಳಿ? ಎಷ್ಟು ಜನ ಪಾಲಿಸಿದ್ದಾರೆ? ನಾವು ಕಳೆದ 10 ವರ್ಷಗಳಿಂದ ಸದನದಲ್ಲಿ ಇದ್ದೇವೆ. ನಾವು ಎಲ್ಲವನ್ನೂ ನೋಡುತ್ತಿದ್ದೇವೆ. ಸಮಯವನ್ನು ಯಾರು ಪಾಲಿಸುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವೇ ಹಾಗೆ ಹೇಳಿದರೆ ಹೇಗೆ ?

ಉಪಾಧ್ಯಕ್ಷರು : ತಾವೊಬ್ಬರು ಒಂದನ್ನು ಪ್ರಶ್ನೆ ಮಾಡಿದರೆ, 25 ಜನರು ಎದ್ದು ನಿಲ್ಲುತ್ತಾರೆ. 25 ಜನ ಇಲ್ಲಿ ಎದ್ದು ನಿಂತರೆ, 10-15 ಜನ ಅಲ್ಲಿ ಎದ್ದು ನಿಲ್ಲುತ್ತಾರೆ . ಯಾರು ನೋಡುತ್ತಾರೆ? ಎಲ್ಲಾ ವ್ಯತ್ಯಾಸಗಳು ಆಗುತ್ತವೆ. ಯಾವುದೂ ಕರೆಕ್ಟಾಗಿ ಇಲ್ಲ. ಇನ್ನು ಮುಂದೆ ಟೈಮ್ ಫಿಕ್ಸ್ ಮಾಡೋಣ ....

ಶ್ರೀ ಬಿ.ಎಸ್. ಯಡಿಯೂರಪ್ಪ : .... ನಿಮ್ಮ ಬಗ್ಗೆ ಅಲ್ಲ ಸಾರ್. ನೀವೇನೂ ಮಾಡುವುದಕ್ಕಾಗುವುದಿಲ್ಲ. ನಾವು ಸಹಕಾರ ಕೊಡಬೇಕು ......

ಉಪಾಧ್ಯಕ್ಷರು : ..... ಸಹಕಾರ ಇಲ್ಲದಿದ್ದರೆ, ಇಲ್ಲಿ ಕುಳಿತುಕೊಂಡು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ನಿಮ್ಮ ಬಗ್ಗೆ ಏನೂ ಮಾತನಾಡುತ್ತಿಲ್ಲ.

ಉಪಾಧ್ಯಕ್ಷರು : ಎರಡೇ ಎರಡು ನಿಮಿಷ ಅವರು ಉತ್ತರ ಹೇಳಿ ಮುಗಿಸಿಬಿಡುತ್ತಾರೆ...

ಶ್ರೀ ಬಿ.ಎಸ್. ಯಡಿಯೂರಪ್ಪ : ...... ನಾನು ನಿಮ್ಮ ಹತ್ತಿರ ವಿನಂತಿ ಮಾಡುತ್ತಿದ್ದೇನೆ. ಈ ರಾಜ್ಯದ ಈ ಜ್ವಲಂತ ಸಮಸ್ಯೆ ಬಗ್ಗೆ ಚರ್ಚೆ ಮಾಡುವುದಕ್ಕೆ, ಅಧಿವೇಶನ ನಾಳೆ ನಡೆಯುವುದಕ್ಕೆ ನೀವು ತೀರ್ಮಾನ ತೆಗೆದುಕೊಳ್ಳಿ. ಸಭಾನಾಯಕರನ್ನು ಕೇಳಿ, ನಾಳೆಗೆ ಅಧಿವೇಶನ ಮುಂದುವರೆಸಿ ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನಾನೇನೂ ಅಡ್ಡಿ ಮಾಡುತ್ತಿಲ್ಲ ....

ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಅವರು ಮಾತನಾಡಿದ್ದು ಕೂಡ ರೈತರಿಗೆ ಸಂಬಂಧಪಟ್ಟ ವಿಚಾರವನ್ನೇ ಅಲ್ಲವೇ ?

ಶ್ರೀ ಬಿ.ಎಸ್.ಯಡಿಯೂರಪ್ಪ : ...... ನಿಮ್ಮ ಪೀಠಕ್ಕೆ ಗೌರವ ಕೊಡಬೇಕಾಗಿರುವುದು ನಮ್ಮ ಕರ್ತವ್ಯ ನಾನು ನಿಮ್ಮ ಬಗ್ಗೆ ಏನೂ ಮಾತನಾಡಲಿಲ್ಲ.....

ಉಪಾಧ್ಯಕ್ಷರು : ಅದೂ ರೈತರಿಗೆ ಸಂಬಂಧಪಟ್ಟಂತಹ ಸಮಸ್ಯೆ ಅಲ್ಲವೇ? ಅವರು ಮಾತನಾಡಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ.

ಅದಕ್ಕೆ ಅವಕಾಶ ಮಾಡಿಕೊಡಿ. ಆಯಿತು. ಅವರದು ಮುಗಿದ ಕೂಡಲೇ ತಾವು ಮಾತನಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರ ಉತ್ತರಕ್ಕೆ ನಾನು ಅಡ್ಡಿ ಮಾಡುತ್ತಿಲ್ಲ...

(ಗೊಂದಲ)

ಉಪಾಧ್ಯಕ್ಷರು : ಮಂತ್ರಿಗಳು ತಮ್ಮ ಉತ್ತರ ಮುಂದುವರೆಸಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : .... ನಾನು ಅದಕ್ಕೆ ಅಡ್ಡಿ ಮಾಡುತ್ತಿಲ್ಲ. ನಾಳೆ ಈ ವಿಷಯದ ಬಗ್ಗೆ ಗಂಭೀರವಾದ ಚರ್ಚೆ ಮಾಡಲಿಕ್ಕೆ ಅಧಿವೇಶನವನ್ನು ಒಂದು ದಿವಸ ಮುಂದುವರೆಸಿ ಎಂದು ನಾನು ತಮಗೆ ವಿನಂತಿ ಮಾಡುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರಿಗೆ ಸಂಪೂರ್ಣ ಸ್ವಾತಂತ್ರ್ಯ ಇದೆ. ನಾವು ಎರಡೂ ಕಡೆಯವರೂ ಸಹ ಅವರಿಗೆ ಸಹಕಾರ ಕೊಡಬೇಕು. ಅದರ ಬಗ್ಗೆ ನನ್ನದೇನೂ ಅಭ್ಯಂತರ ಇಲ್ಲ. ನಾವು Business Advisory Committee ನಲ್ಲಿ ಕುಳಿತಾಗ ಏನೊಂದು ಚರ್ಚೆಯಾಯಿತೋ, ಅದರ ಪ್ರಕಾರ ಚರ್ಚೆಗೆ ಅವಕಾಶವಾಗಬೇಕು. ನೀವು ಉತ್ತರ ಕೊಟ್ಟ ಮೇಲೆ. ಈ ಗಂಭೀರವಾದ ವಿಷಯವನ್ನು ಚರ್ಚೆ ಮಾಡಲಿಕ್ಕೆ ನಾಳೆಗೆ ಅಧಿವೇಶನವನ್ನು ಮುಂದುವರೆಸಿ.....

ಉಪಾಧ್ಯಕ್ಷರು : ಅದರ ಬಗ್ಗೆ ನೋಡೋಣ. ತಾವು ದಯವಿಟ್ಟು ಕುಳಿತುಕೊಳ್ಳಿ. ಮೊದಲು ಅವರು ಉತ್ತರ ಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ..... ನಾನು ನಿಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ ಸಾರ್...

ಉಪಾಧ್ಯಕ್ಷರು : ಆಯಿತು, ತಾವು ಕುಳಿತುಕೊಳ್ಳಿ. ಅದರ ಬಗ್ಗೆ ನೋಡೋಣ, ಮಾತನಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಮಗೆ ಕುಳಿತುಕೊಳ್ಳಲಿಕ್ಕೆ ಗೊತ್ತಿದೆ. ಸಭಾನಾಯಕರ ಜೊತೆಗೆ ಸಮಾಲೋಚನೆ ಮಾಡಿ, ನಾಳೆ ಈ ಗಂಭೀರವಾದ ವಿಷಯ ಚರ್ಚೆ ಮಾಡುವುದಕ್ಕೆ ಒಂದು ದಿನ ಮುಂದೂಡುವಂತಹ ಪ್ರಯತ್ನ ಮಾಡಿ ಎಂದು ನಿಮಗೆ ವಿನಂತಿ ಮಾಡುತ್ತಿದ್ದೇನೆ. ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ. ನಾನು ಬೇರೇನೂ ಮಾತನಾಡುತ್ತಿಲ್ಲ. There is a limit for everything.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಾವು ಸಲಹಾಸಮಿತಿ ಸಭೆಗೆ ಮುಂಚಿತವಾಗಿ ಕೃಷ್ಣಾ ಬಗ್ಗೆ ಚರ್ಚೆ ಮಾಡುವುದಕ್ಕೆ ನಮ್ಮದೇ ಆದಂತಹ ನಿರ್ಧಾರಗಳಿವೆ. ಅದರ ವಿಚಾರ ಬೇರೆ, ಆದರೆ ಚರ್ಚೆಗೊಂದು ಅವಕಾಶ ಬೇಕಾಗಿತ್ತಲ್ಲಾ. ಈಗ 6.15 ಗಂಟೆಯಾಯಿತು. ಕನಿಷ್ಟ 4 ಗಂಟೆಗೆ ಅಥವಾ 5 ಗಂಟೆಗೆ ಮಾಡಬಹುದಾಗಿತ್ತು. ಇದು ಬಹಳ ಪ್ರಾಮುಖ್ಯವಾದುದು. ಕೃಷ್ಣಾ ವಿಚಾರ ಬಹಳ ಪ್ರಾಮುಖ್ಯವಾದುದು. ಅದೇನೂ ಅಷ್ಟು ಸುಲಭವಾಗಿ ಬಿಡತಕ್ಕಂಥದ್ದಲ್ಲ. ಎಲ್ಲೋ ಒಂದು ರೀತಿ ಗಾಳಿಯಲ್ಲಿ ಹೋದಂತೆ ಮಾಡುವುದಕ್ಕಾಗುವುದಿಲ್ಲ. ಬಹಳ ಅನ್ಯಾಯ ನಡೆದಿದೆ. ಕರ್ನಾಟಕಕ್ಕೆ ಮೋಸ ಆಗಿದೆ. ಕರ್ನಾಟಕವನ್ನು ಕಡೆಗಾಣಿಸಿದ್ದಾರೆ. ಆಂಧ್ರದವರು ಯದ್ವಾ-ತದ್ವಾ ನಮ್ಮನ್ನು ಕಡೆಗಾಣಿಸಿದ್ದಾರೆ. ಆದ್ದರಿಂದ ನಾನು ತಮಗೆ ಏನು ಹೇಳುತ್ತೇನೆಂದರೆ, ತಾವು ಒಂದು ದಿನ ಸದನವನ್ನು ಮುಂದುವರೆಸಿ. ನಾಳೆ ವಿಶೇಷವಾಗಿ ಇದರ ಬಗ್ಗೆಯೇ ಚರ್ಚೆ ಮಾಡೋಣ. ಮಾನ್ಯ ಸಭಾನಾಯಕರನ್ನು ಕೇಳಿ, ಮಾತುಕತೆ ಆಡಿ, ದಯವಿಟ್ಟು ಅದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ.

ಉಪಾಧ್ಯಕ್ಷರು : ನೀವು ಕುಳಿತುಕೊಳ್ಳಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು submission ಇದೆ. ಮಾನ್ಯ ದೇಶಪಾಂಡೆ ಸಾಹೇಬರೆ,............

ಶ್ರೀ ಆರ್.ವಿ. ದೇಶಪಾಂಡೆ : ದಯವಿಟ್ಟು ಕುಳಿತುಕೊಳ್ಳಿ, please co-operate. ರಾಜ್ಯದ ಸಕ್ಕರೆ ಕಾರ್ಖಾನೆಗಳು ರಾಜ್ಯದ ನಮ್ಮ ಸರ್ಕಾರಿ ಖಜಾನೆಗೆ ಸಾಕಷ್ಟು ತೆರಿಗೆ ರೂಪದಲ್ಲಿ ಹಣವನ್ನೂ ಕೂಡ ಕೊಟ್ಟಿದ್ದಾರೆ. 2002-03ರಲ್ಲಿ 1263.34 ಕೋಟಿ ರೂ. ಗಳಲ್ಲಿ ರಾಜ್ಯ ಸರ್ಕಾರಕ್ಕೆ 1148 ಕೋಟಿ ರೂ.ಗಳು ಬಂದಿದೆ. 114.94 ಕೋಟಿ ರೂ. ಕೇಂದ್ರ ಸರ್ಕಾರಕ್ಕೆ ಹೋಗಿದೆ. 2003-04 ರಲ್ಲಿ 719.27 ಕೋಟಿ ರೂ.ಗಳು ರಾಜ್ಯ ಸರ್ಕಾರದ ಖಜಾನೆಗೆ ಬಂದಿದೆ. ಕೇಂದ್ರ ಸರ್ಕಾರಕ್ಕೆ 71.93 ಕೋಟಿ ರೂ. ಹೋಗಿದೆ. 2004-05ರ ಸೆಪ್ಟೆಂಬರ್ ತನಕ 228 ಕೋಟಿ ರೂ.ಗಳು ಸರ್ಕಾರಿ ಖಜಾನೆಗೆ ಬಂದಿದೆ. ಸಕ್ಕರೆ ಕಾರ್ಖಾನೆಗಳಿಂದ ಸಾಕಷ್ಟು employment generation ಆಗಿದೆ. ರೈತರಿಗೂ ಅನುಕೂಲವಾಗಿದೆ. ಸರ್ಕಾರಕ್ಕೂ ಸಾಕಷ್ಟು ಆದಾಯ ಬಂದಿದೆ. ಆದರೆ ಒಂದು ಮಾತನ್ನು ಬಹಳ ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲಿ ಪಾರದರ್ಶಕತೆ ಇಲ್ಲ. ನಾನು ಈಗಾಗಲೇ ಹೇಳಿದ ಹಾಗೆ, ಇಲ್ಲಿ financial discipline ಇಲ್ಲ. ಹಿಂದೆ ನಾನು

ಕೈಗಾರಿಕಾ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಇದೇ ರೀತಿಯ ವಿಚಾರ ಪ್ರೈವೇಟ್ ಸೆಕ್ಟಾರ್‌ನಲ್ಲಾದರೆ ಮೊದಲನೇ ದಿವಸವೇ ಅಲ್ಲಿ ಎಂ.ಡಿ. ಡಿಸ್‌ಮಿಸ್ ಆಗುತ್ತಾನೆ. ನಾವು ಇಲ್ಲಿ ಏನು ಮಾಡಲಿಕ್ಕೆ ಬರುತ್ತದೆ? ಯಾರ ಮೇಲಾದರೂ ಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ, there is political pressure. ಇವತ್ತು ನಮ್ಮ ಮುಂದೆ ಕೌಜಲಗಿ ಕಮಿಟಿ ರಿಪೋರ್ಟ್ ಇದೆ. ಯಾವ ಕೈಗಾರಿಕೆಯನ್ನು ನಾವು ಪ್ರೈವೆಟೈಸ್ ಮಾಡಬೇಕು. ಯಾವುದನ್ನು ಲಿಕ್ವಿಡೇಟ್ ಮಾಡಬೇಕು, ಯಾವುದನ್ನೂ ಮುಚ್ಚಬೇಕು ಎಂಬುದನ್ನು ನೋಡಬೇಕು. ಹಾಗೆಲ್ಲ ಸುಮ್ಮನೆ ಮಾಡಲಿಕ್ಕೆ ಬರುವುದಿಲ್ಲ. ಈಗಾಗಲೇ ಶುಗರ್ ಫ್ಯಾಕ್ಟರಿ ಬಗ್ಗೆ ನಾನು ಹೇಳಿದ್ದೇನೆ. ಹಲವಾರು ಸರ್ಕಾರಗಳು, ಅದು ಕೃಷ್ಣಾ ಗೌರ್ನಮೆಂಟ್ ಇರಬಹುದು, ಧರ್ಮಸಿಂಗ್‌ರವರದ್ದು ಇರಬಹುದು, ಅದರ ಮುಂಚಿನ ಗೌರ್ನಮೆಂಟ್‌ಗಳು ಇರಬಹುದು, ಸಾಕಷ್ಟು ಸಹಾಯ ಮಾಡಿದ್ದಾರೆ. ಅದು ನನಗೆ ಗೊತ್ತಿದೆ. ಬಹಳ ಕಷ್ಟ ಇದೆ. ಇವತ್ತು ಮಂಡ್ಯದಲ್ಲಿನ ಮೈಶುಗರ್ ಏನಾಗಿದೆ? ಅದು ಒಳ್ಳೆಯ ಕೈಗಾರಿಕೆ. ಅದು ಏನಾಯಿತು? ಹಣ ಕೊಟ್ಟಿದ್ದು ಕೋ-ಜನರೇಷನ್‌ಗೆ, mis-use ಮಾಡಿದ್ದಾರೆ. ಮೊನ್ನೆ ಡೆಪ್ಯುಟಿ ಸಿ.ಎಂ. ಮೀಟಿಂಗ್ ಕರೆದಾಗ ಆ ವಿಷಯ ಚರ್ಚೆಗೆ ಬಂದಿತ್ತು. ಎಲ್ಲಾ ಕಡೆ ಏನಾಗಿದೆ ಎಂದರೆ, ಮುಖ್ಯವಾಗಿ ಇಲ್ಲಿ ಭಯ ಇಲ್ಲ. ಇವತ್ತು ನಾನು ಪ್ರೈವೇಟ್ ಸೆಕ್ಟರ್ ಬಹಳ ಒಳ್ಳೆಯದು, co-operative sector ಕೆಟ್ಟಿದ್ದು ಎಂದು ಹೇಳುತ್ತಿಲ್ಲ. co-operative sector ನಿಂದ ಬಹಳ ದೊಡ್ಡ ಸೇವೆ ಆಗಿದೆ. co-operative sector ಮುಖಾಂತರ ನಾವು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯ, ರೈತರ ಕಷ್ಟ ದೂರ ಮಾಡಲಿಕ್ಕೆ ಸಾಧ್ಯ. ಒಬ್ಬ ರೈತರಿಗೆ ಸಾಲ ಬೇಕಾದರೆ, National Bank ನಲ್ಲಿ ಅದು ಸಿಗುವುದು ಬಹಳ ಕಷ್ಟ. ಆದರೆ ಸಹಕಾರಿ ಸಂಸ್ಥೆಗಳು ಮನೆಗಳಿಗೆ ತೆಗೆದುಕೊಂಡು ಹೋಗಿ ಕೊಡುತ್ತವೆ. ಹಾಗಾಗಿ ಸಹಕಾರಿ ಸಂಸ್ಥೆಗಳು ಬೇಕು. ಊರ್ಜಿತಾವಸ್ಥೆಗೆ ಬರಬೇಕು ಎಂಬುದು ನಮಗೆ ಗೊತ್ತು. ನಾವು ಹಲವಾರು ಕನ್‌ಸೆಷನ್ ಕೊಟ್ಟು ಒಂದು ಕಡೆ ಕೋ-ಆಪರೇಟಿವ್ ಸೆಕ್ಟಾರ್ ರಿವೈಟಲೈಸ್ ಆಗಬೇಕು. ರೈತರಿಗೂ ಅನುಕೂಲವಾಗಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇವೆ. ಈಗ ನಮ್ಮ ಸ್ನೇಹಿತರಿಗೆ ಸಮಯದ ಬಹಳ ಅಭಾವ ಇದೆ. ಆದರೂ ಸಹ ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಸಹಕರಿಸಬೇಕಾಗಿ ಕೋರತ್ತೇನೆ. ಮಾನ್ಯ

ಮಾಧುಸ್ವಾಮಿಯವರು ಹೇಳಿದರು, ಅಟಾನಮಿ ಕೊಡಿ ಎಂದು ಹೇಳಿದರು, ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಅಟಾನಮಿ ಇಲ್ಲವೆಂದು ಈ ಪರಿಸ್ಥಿತಿ ಇದೆ. ಡೈರೆಕ್ಟರ್ ಆಫ್ ಶುಗರ್ ಇದೆ, ಪ್ರಿನ್ಸಿಪಲ್ ಸೆಕ್ರೆಟರಿ ಆಫ್ ಇಂಡಸ್ಟ್ರೀಸ್ ಇದ್ದಾರೆ, ಜಾಯಿಂಟ್ ರಿಜಿಸ್ಟ್ರಾರ್ ಇದ್ದಾರೆ. ಈ ಪರಿಸ್ಥಿತಿ ಇದೆ. ಪೂರ್ಣ ಸ್ವಾತಂತ್ರ್ಯಕೊಟ್ಟರೆ ಏನಾಗಬಹುದು? ಸ್ವಾತಂತ್ರ್ಯ ಕೊಡುವುದಕ್ಕೆ ನಮಗೇನೂ ತೊಂದರೆ ಇಲ್ಲ. I am for autonomy. ಹಾಗಾದರೆ ನಾವು ವಿಚಾರ ಮಾಡಬೇಕಾಗುತ್ತದೆ. ಯಾವ ರೀತಿಯಾಗಿ ಇದು ನಡೆಯುತ್ತಿದೆ, ನಾನು ಹಾಗೆಯೇ ಬೆಳಗಾಂ ಡಿವಿಷನ್‌ಗೆ ರಿವ್ಯೂ ಮಾಡಿದಾಗ ನಮ್ಮ ಜಾಯಿಂಟ್ ರಿಜಿಸ್ಟ್ರಾರ್ ಹೇಳಿದರು I was going for Hubli. ನಾನು ಹೇಳಿದೆ, ಬೆಳಗಾಂನಲ್ಲಿ ನಾನು ಕೊಡುತ್ತೇನೆ, ಸಂಜೆ ನಾಲ್ಕು ಗಂಟೆಯವರೆಗೆ ನನಗೆ ಒಂದು ರಿಪೋರ್ಟ್ ಬೇಕು. ಮಲಪ್ರಭ ಶುಗರ್ ಫ್ಯಾಕ್ಟರಿಯಲ್ಲಿ ಮತ್ತು ಭಾಗ್ಯಲಕ್ಷ್ಮಿಯಲ್ಲಿ ಸಕ್ಕರೆ ಚೀಲ ಖರೀದಿ ಮಾಡಿದ್ದು ಏನಾಗಿದೆ ಎಂದು ಹೇಳಿ, ನಮಗೆ ಒಂದು ರಿಪೋರ್ಟ್ ಬಂದಿತ್ತು that there is difference ನೀವು ಏನು ಹೇಳುತ್ತಿದ್ದೀರಿ ಅಷ್ಟು ಡಿಫರೆನ್ಸ್ ಇಲ್ಲ. ಆದರೂ ಸಹ ಡಿಫರೆನ್ಸ್ ಇತ್ತು. ಹಾಗಾಗಿ ಅದು ಗೋಣಿ ಚೀಲ ಇರಬಹುದು, ಅದು ಸಲ್ಫರ್ ಇರಬಹುದು, ಅದು ರಾಮೆಟೀರಿಯಲ್ ಇರಬಹುದು, ಅದು ಎಕ್ವಿಪ್‌ಮೆಂಟ್ ಇರಬಹುದು, ದುರುಪಯೋಗ ನಡೆಯುತ್ತಿತ್ತಾ ಇಲ್ಲವೆಂದು ನಾನು ಹೇಳುವುದಿಲ್ಲ. ದುರುಪಯೋಗ ನಡೆಯುತ್ತಿದೆ. ಹಾಗಾಗಿ ಇದಕ್ಕೆ ಒಂದು ಕಡಿವಾಣ ಹಾಕಲಿಕ್ಕೆ ಏನು ಮಾಡಲಿಕ್ಕೆ ಸಾಧ್ಯ ಇದೆ ಎಂದು ಅದರ ಬಗ್ಗೆ ಚಿಂತನೆ ಸರ್ಕಾರದಲ್ಲಿ ನಡೆಯುತ್ತಿದೆ. ಇವತ್ತು ನಾವು ರಾಜ್ಯಮಟ್ಟದಲ್ಲಿ ತಾವು ಹೇಳಿದ ಹಾಗೆ ಮ್ಯಾನ್ಯುಫ್ಯಾಕ್ಚರರ್ಸ್ ರೆಕಗ್‌ನೈಸ್ ಮಾಡಿ, ಆಥರೈಸ್ಡ್ ಡೀಲರ್ಸ್ ರೆಕಗ್‌ನೈಸ್ ಮಾಡಿ ಅವರ ಕಡೆಯಿಂದ ಕೊಟೇಷನ್ ತಂದು ಟೆಂಡರ್ ಪ್ಲೇಸ್ ಮಾಡಬೇಕೆಂಬ ಬಗ್ಗೆ ಸಹ ಚಿಂತನೆ ನಡೆಯುತ್ತಿದೆ. ಅದರಲ್ಲಿ ಸಹ ಒಂದು ವೇಳೆ ದುರುಪಯೋಗ ಆಗುವ ಸಂಭವ ಇದೆ. ಹಾಗಾಗಿ ಒಂದುಕಡೆ ಸಕ್ಕರೆ ಕಾರ್ಖಾನೆ ಸಾಧ್ಯವಿದ್ದರೆ ನಾವು ಕೊಡಬೇಕಾಗುತ್ತದೆ. ಟೋಟಲಿ ನಾವು ಅವರ ಮೇಲೆ ಬ್ಯೂರೋಕ್ರಾಟಿಕ್ ಕಂಟ್ರೋಲ್ ಇಡುವುದು ಸರಿಯಲ್ಲ. ಆದರೆ ಸಕ್ಕರೆ ಕಾರ್ಖಾನೆ ನಡೆಸುವವರೂ ಸಹ ತಮ್ಮ ಜವಾಬ್ದಾರಿ ತಿಳಿದು ಕೋಳ್ಳಬೇಕಾಗುತ್ತದೆ. ಜವಾಬ್ದಾರಿಯಿಂದ ಸಕ್ಕರೆ ಕಾರ್ಖಾನೆಯನ್ನು ನಡೆಸಬೇಕಾಗಿದೆ. ನಡೆಸಲಿಲ್ಲವೆಂದರೆ ಸರ್ಕಾರ ಇಂಟರ್‌ವೆನ್‌ಷನ್ ಮಾಡಿ ಕ್ರಮ ತೆಗೆದುಕೊಳ್ಳುತ್ತದೆ. ನಾನು ಈ ಸದನದ

ಮೂಲಕ ಭರವಸೆ ಕೊಡುತ್ತೇನೆ. ಇದರಲ್ಲಿ ಯಾರಿಗೂ ಪ್ರೊಟೆಕ್ಟ್ ಮಾಡುವ ಪ್ರಶ್ನೆ ಇಲ್ಲ. ರೈತರ ಹಿತದ ವಿರುದ್ಧ ಯಾವ ಸಂಸ್ಥೆಗಳು ಕೆಲಸ ಮಾಡುತ್ತವೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ನೀವು ರೋಡ್ ಡೆವಲಪ್‌ಮೆಂಟ್ ಬಗ್ಗೆ ಹೇಳಿದಿರಿ. ಮಾನ್ಯ ಕೃಷ್ಣಪ್ಪನವರು ಮತ್ತ ಮಾನ್ಯ ತಮ್ಮಣ್ಣನವರು ಇದರ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಇವತ್ತು ಮಂತ್ರಿಗಳಿಗೆ ಈ ಫೈಲ್ ಬರುವುದಿಲ್ಲ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಆಗಿದೆ. ಅಲ್ಲಿ ಶಾಸಕರು ಸದಸ್ಯರಿರುತ್ತಾರೆ. ಸಕ್ಕರೆ ಕಾರ್ಖಾನೆಯವರ ಅಭಿಪ್ರಾಯ ತೆಗೆದುಕೊಳ್ಳುತ್ತಾರೆ. ಜಿಲ್ಲಾಧಿಕಾರಿಗಳು ಅಲ್ಲಿಯೇ ಡಿಸೈಡ್ ಮಾಡುತ್ತಾರೆ. ಎಲ್ಲಿ ಡಿಫರೆನ್ಸ್ ಬಂದಾಗ ಡೈರೆಕ್ಟರ್ ಆಫ್ ಶುಗರ್ ಕರೆಸಲಿಕ್ಕೆ ನಾವು ಹೇಳಿದ್ದೇವೆ. ಆದರೆ ಸರ್ಕಾರದಿಂದ ಆದಷ್ಟು ಮಟ್ಟಿಗೆ ಇದರಲ್ಲಿ ನಾವು ಕೈ ಹಾಕುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಆದರೆ ಎಲ್ಲಿ ಈ ರಸ್ತೆ ಇಲ್ಲ, ಹಣ ದುರುಪಯೋಗ ಆಗಿದೆ ಎಂಬುದನ್ನು ನನ್ನ ಗಮನಕ್ಕೆ ತಂದಿರಿ, ತಕ್ಷಣ ಅದೇ ಕ್ಷಣ ನಾನು ಎನ್ ಕ್ವೈರಿ ಮಾಡಿಸುತ್ತೇನೆ ಎಂದು ನಿಮಗೆ ಭರವಸೆ ಕೊಡುತ್ತೇನೆ. ಪರಿವರ್ತನ ಕಾಸ್ಟ್.....

ಶ್ರೀ ಬಿ.ಎ. ಜೀವಿಜಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೇ, ತಾವು ದುರುಪಯೋಗ ದುರ್ವ್ಯವಹಾರ ಆಗುತ್ತಿದೆ ಎಂದು ತಾವು ಒಪ್ಪಿಕೊಳ್ಳುತ್ತಿದ್ದೀರಿ. ಆದರೆ ಇದನ್ನು ಯಾವ ಏಜೆನ್ಸಿಯಿಂದ ಇನ್ವೆಸ್ಟಿಗೇಷನ್ ಮಾಡಿಸುತ್ತೀರಿ, ರಾಮಸ್ವಾಮಿಯವರು ಹೇಳಿದ ಪ್ರಕಾರ ಎಷ್ಟು ಕೋಟ್ಯಾಂತರ ರೂಪಾಯಿ ದುರ್ವ್ಯವಹಾರವಾಗಿದೆ ಅದನ್ನು ಏನು ಮಾಡುತ್ತೀರಿ? ಏನಾದರೂ ನೀವು ಸಿಬಿಐಗೆ ರೆಫರ್ ಮಾಡುತ್ತೀರಾ? ಅದನ್ನು ದಯವಿಟ್ಟು ತಾವು ಹೇಳಿ.

ಶ್ರೀ ಶಿವಾನಂದ ಪಾಟೀಲ್ : ಛಲೋ ನಡೆಯುವ ಕಾರ್ಖಾನೆಗಳ ಬಗ್ಗೆ ಹೇಳಿ. ನಂದಿ ಶುಗರ್ ಫ್ಯಾಕ್ಟರಿ ಬಗ್ಗೆ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. Allow me, I know. ಹಾಗಾಗಿ ರೋಡ್ ಡೆವಲಪ್‌ಮೆಂಟ್ ಇದೆಯಲ್ಲಾ ಅದು ಇನ್ನೂ ಪಾರದರ್ಶಕವಾಗಿ ಆಗಬೇಕೆಂದು ಕೆಲವು ಡಿಸಿಷನ್ ತೆಗೆದುಕೊಂಡಿದ್ದೇನೆ. ಹಾಗಾಗಿ ಸ್ಪೆಸಿಫಿಕ್ ಇನ್‌ಸಿಡಂಟ್ಸ್ ಇದ್ದರೆ ಎಲ್ಲಿ ಹಣ ದುರುಪಯೋಗವಾಗಿದೆ ಎಂದು ಹೇಳಿ, ಖಂಡಿತ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಪರಿವರ್ತನ ಕಾಸ್ಟ್ 250 ರಿಂದ 300 ಆಗಿರಬಹುದು. ತಾವು ಹೇಳಿದಿರಿ, ಎರಡು ಲಕ್ಷ ರೂ ಪರ್ ಕ್ವಿಂಟಾಲ್‌ಗೆ ಎಂದು: ನನಗನ್ನಿಸುತ್ತದೆ

ಪರಿವರ್ತನ ಕಾಸ್ಟ್ ಎಂದರೆ ಕಬ್ಬು ಇಲ್ಲ. ಆಳಂದದಲ್ಲಿ ಕಬ್ಬು ಇಲ್ಲ, ಲಾಸ್ ಎಲ್ಲಿಂದ ಆಗಿದೆ? ಆದರೆ ಹಣದ ದುರುಪಯೋಗ ಕನ್ವರ್‌ಷನ್‌ನಲ್ಲಿ ಆಗಿದ್ದರೆ ನಾವು ಎನ್‌ಕ್ವೈರಿ ಮಾಡ ಬೇಕಾಗುತ್ತದೆ. ತಕ್ಷಣ ನಾಳೆ ಇದರ ಬಗ್ಗೆ ಎನ್‌ಕ್ವೈರಿಗೆ ಆರ್ಡರ್ ಮಾಡಿಸಿ ನಾನು ಸದನಕ್ಕೆ ಮತ್ತು ನಿಮಗೆ ಏಕೆ ಇದು ಕಾಸ್ಟ್ ಆಯಿತು, ಎರಡು ಲಕ್ಷ, ಸರಿಯೋ ತಪ್ಪೋ, ಕಡಿಮೆ ಆಗಿದೆ, ಹೆಚ್ಚಾಗಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಮೊಲ್ಯಾಸಿಸ್, ಇದರಲ್ಲಿ ದುರುಪಯೋಗ ಆಗುತ್ತದೆ. ಆಗುವುದಿಲ್ಲವೆಂದು ಹೇಳುವುದಿಲ್ಲ. ಪ್ರಧಾನ ಕಾರ್ಯದರ್ಶಿಯವರ ಪತ್ರವನ್ನು ಓದಿ ಹೇಳಿದಿರಿ, ಇವತ್ತು ಕೆಲವುಸಾರಿ ಏನಾಗುತ್ತದೆ, ನಾನು ಡಿಫೆಂಡ್ ಮಾಡುತ್ತಿಲ್ಲ. ಶುಗರ್ ಮಾರಾಟ ಮಾಡುವುದು ಹೇಗೆ, ಒಂದು ಲೆವಿ ಮುಖಾಂತರ ಅಥವಾ ಆಕ್ಷನ್ ಮುಖಾಂತರ ಅಥವಾ ಎಕ್ಸ್‌ಪೋರ್ಟ್ ಮಾಡಬಹುದು. ಹಾಗಾಗಿ ಡೈರೆಕ್ಟ್ ಶುಗರ್ ಮಾರಾಟ ಮಾಡುವ ಅಧಿಕಾರ ಇಲ್ಲ. ಕೆಲವು ಕೈಗಾರಿಕೆಗಳು ನೇರವಾಗಿ ಸಕ್ಕರೆ ಮಾರಾಟ ಮಾಡಿವೆ ಎಂದು ಹೇಳಿದಿರಿ, ಅದು ನಮ್ಮ ಗಮನಕ್ಕೆ ಬಂದಿಲ್ಲ, ಇದರ ಬಗ್ಗೆ ಸಹ ನಾನು ತನಿಖೆ ಮಾಡಿಸುತ್ತೇನೆ, ಎಂದು ತಮಗೆ ಭರವಸೆ ಕೊಡುತ್ತೇನೆ. ಮತ್ತು ಮಾಲ್ಯಾಸಿಸ್ ಬಗ್ಗೆ ತಾವು ಹೇಳಿದಿರಿ. ಪ್ರಧಾನ ಕಾರ್ಯದರ್ಶಿಯವರ ಪತ್ರದ ಬಗ್ಗೆ ಹೇಳಿದಿರಿ, ಈಗ ಕೆಲವು ಸಾರಿ ಏನಾಗುತ್ತದೆ, ಒಂದು ಅಗ್ರಿಮೆಂಟ್ ಆಗುತ್ತದೆ. ಈ ರೇಟ್‌ನಲ್ಲಿ ನಾವು ಮಾಲ್ಯಾಸಿಸ್ ಕೊಡುತ್ತೇವೆ, ಈ ರೇಟ್‌ನಲ್ಲಿ ನಾವು ತೆಗೆದುಕೊಳ್ಳುತ್ತೇವೆಂದು ಆ ಅಗ್ರಿಮೆಂಟ್ ಆದ ನಂತರ ಒಂದು ವೇಳೆ ರೇಟ್ ಹೆಚ್ಚಿಗೆ ಆದರೂ ಸಹ ಆ ಅಗ್ರಿಮೆಂಟ್‌ಗೆ ನಾವು ಮಾನ್ಯತೆ ಕೂಡ ಬೇಕಾಗುತ್ತದೆ. ಅದು ಯಾವ ಸಂದರ್ಭದಲ್ಲಿ ಆಗಿದೆ, ಏಕೆ ಹೀಗೆ ಆಯಿತು ಅದರ ಬಗ್ಗೆ ಸಹ ನೀವು ನನ್ನ ಗಮನಕ್ಕೆ ತನ್ನಿ. ಅದರ ಬಗ್ಗೆ ಸಹ ವಿಚಾರಣೆ ಮಾಡುತ್ತೇನೆಂದು ಭರವಸೆ ಕೊಡುತ್ತೇನೆ. ಮಾನ್ಯ ಶಿವಾನಂದ ಪಾಟೀಲರು ಹೇಳಿದ ಹಾಗೆ ಎಲ್ಲಾ ಸಕ್ಕರೆ ಕಾರ್ಖಾನೆಗಳು ಸಹಕಾರಿ ಕ್ಷೇತ್ರದಲ್ಲಿ ಹೀಗೆಯೇ ಇವೆ ಎಂದು ಹೇಳುವುದಿಲ್ಲ. ಒಳ್ಳೆಯ ಕಾರ್ಖಾನೆಗಳು ಇವೆ. ನಮ್ಮ ನಂದಿ ಸಕ್ಕರೆ ಕಾರ್ಖಾನೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಪ್ರೈವೇಟ್ ಸೆಕ್ಟರ್‌ಗಿಂತ ಒಳ್ಳೆಯ ಕೆಲಸ ಮಾಡುತ್ತಿದೆ. ಪಾರದರ್ಶಕತೆಯಿಂದ ಕೆಲಸ ಮಾಡುತ್ತಿದೆ. ಹಾಗಾಗಿ ಸರಾಸರಿ ಎಲ್ಲಾ ಕೈಗಾರಿಕೆಗಳು ಹಾಗೆಯೇ ಇವೆ ಎಂದು ನಾವು ಒಪ್ಪಿಕೊಳ್ಳಲಿಕ್ಕೆ ತಯಾರಿಲ್ಲ. ಮೆಜಾರಿಟಿ ಎಲ್ಲಿ ಸ್ವಲ್ಪ ಲಾಸ್ ಹೆಚ್ಚಿಗೆ ಇದೆ ಮೂರು ಸಕ್ಕರೆ ಕಾರ್ಖಾನೆಗಳು ಅಷ್ಟೇ ಲಾಭ ಮಾಡುತ್ತಿವೆ. ಎನ್‌ಸಿಡಿಸಿ ಏನು ಇದೆ ನಾವು ಯಾವುದಾದರೂ

ಪ್ರಪೋಸಲ್ ಎನ್‌ಸಿಡಿಸಿಗೆ ಕಳುಹಿಸಬೇಕಾದರೆ ಸಹ ಅದು ವರ್ಕಿಂಗ್ ಕ್ಯಾಪಿಟಲ್ ಇರಬಹುದು, ಅದು ಟರ್ಮ್ ಲೋನ್ ಇರಬಹುದು, ಅದು ಫೈನಾನ್ಸ್ ಡಿಪಾರ್ಟ್‌ಮೆಂಟ್ ಮಾನ್ಯತೆ ವಿರುದ್ಧ ಕಳುಹಿಸುವುದಕ್ಕಾಗುವುದಿಲ್ಲ. Not only in NCDC loans, ಫೈನಾನ್ಸಿಯಲ್ ಇನ್‌ವಾಲ್ವಮೆಂಟ್ ಎಲ್ಲಿ ಇದೆ, ಅಲ್ಲಿ ಎಫ್‌ಡಿ ಕನ್‌ಕರೆನ್ಸ್ ವಿನಹ no proposal can go to the cabinet. ಹಾಗೆ ತಾವು ಹೇಳಿದಿರಿ, ಆ ಮಂತ್ರಿಗಳ ಬಗ್ಗೆ ಏನು ಪ್ರಸ್ತಾಪ ಮಾಡಿದಿರಿ, ಅದರ ಬಗ್ಗೆ ನಾನು ಕಾಮೆಂಟ್ ಮಾಡುವುದಿಲ್ಲ. ಏಕೆಂದರೆ, ಅವರು ಈ ಸದನದ ಸದಸ್ಯರು ಅಲ್ಲ. ಮೂರು ಪರ್ಸೆಂಟ್ ತೆಗೆದುಕೊಳ್ಳುವುದು ನನಗೆ ಗೊತ್ತಿಲ್ಲ. ಅದರ ಬಗ್ಗೆ I do not want to comment anything and I am not aware of it. ಆದರೆ ಎನ್‌ಸಿಡಿಸಿಗೆ ನೇರವಾಗಿ ಪ್ರಪೋಸಲ್ ಕಳುಹಿಸುವ ಪ್ರಶ್ನೆ ಬರುವುದಿಲ್ಲ. ಪ್ರಪೋಸಲ್ ಕ್ಯಾಬಿನೆಟ್ ಮುಂದೆ ಹೋಗಿ ಕ್ಯಾಬಿನೆಟ್ ಅಪ್ರೋವಲ್ ಆಗಿ ಹೋಗಬೇಕಾಗುತ್ತದೆ. ಒಂದು ಮಾತು ಹೇಳುತ್ತೇನೆ, ಕೆಲವು ಸಾರಿ ಏನು ಹಣ ಇದೆ ಅದು ಗವರ್ನ್‌ಮೆಂಟ್ ಟ್ರಜರಿಗೆ ಬರುತ್ತದೆ. ಗವರ್ನ್‌ಮೆಂಟ್ ಟ್ರೆಜರಿಯಿಂದ ಅವರಿಗೆ ರಿಲೀಸ್ ಆಗಲಿಕ್ಕೆ ಆರು-ಆರು ತಿಂಗಳುಗಳಾದರೂ ರಿಲೀಸ್ ಆಗುವುದಿಲ್ಲ. ಹಾಗಾಗಿ ಎಸ್ಕಲೇಷನ್ ಕಾಸ್ಟ್ ರೈಸ್ ಆಗುತ್ತದೆ. ಮತ್ತು ಇದರಿಂದ ತೊಂದರೆಯಾಗುತ್ತದೆ. ಹಾಗಾಗಿ ಶುಗರ್ ಇಂಡಸ್ಟ್ರೀ ನವರು ಒಂದು ಡಿಮಾಂಡ್ ಇದೆ. ಏನು ಇದೆ, ಎನ್‌ಸಿಡಿಸಿ ಸ್ಯಾಂಕ್ಷನ್ ಮಾಡಿದ ನಂತರ ಹಣವನ್ನು ಡೈರೆಕ್ಟಾಗಿ ಅಪೆಕ್ಸ್ ಬ್ಯಾಂಕ್‌ಗೆ ಜಮ ಮಾಡಿ ರಿಲೀಸ್ ಮಾಡಿ, ಸರ್ಕಾರದ ಟ್ರೆಜರಿಗೆ ಹೋದರೆ ಕೆಲವು ಸಾರಿ ಸರ್ಕಾರಕ್ಕೆ ತೊಂದರೆ ಇರುತ್ತದೆ, ಫೈನಾನ್ಷಿಯಲ್ ಪ್ರಾಬ್ಲಮ್ ಇರುತ್ತದೆ. ಆರು ತಿಂಗಳು ಒಂದು ವರ್ಷ ಹಣ ಸರ್ಕಾರದಿಂದ ರಿಲೀಸ್ ಆಗುವುದಿಲ್ಲ. ಆದ್ದರಿಂದ ಕಾರ್ಖಾನೆ ಬೆಳವಣಿಗೆ ಕಾರ್ಖಾನೆಯ ಕೆಲಸಗಳಿಗೆ ತೊಂದರೆಯಾಗುತ್ತದೆ. ಎಂಬ ಒಂದು ಡಿಮಾಂಡ್ ಇದೆ. ಹಾಗಾಗಿ ಒಂದು ವೇಳೆ ಇದರಲ್ಲಿ ದುರುಪಯೋಗವಾಗಿದ್ದರೆ, ಅದು ಮೊಲಾಸಿಸ್, ಇರಬಹುದು, ರೋಡ್ ಇರಬಹುದು, ನಾವು ಖಂಡಿತವಾಗಿ ಅದರ ಬಗ್ಗೆ ವಿಚಾರಣೆ ಮಾಡುತ್ತೇವೆ. ಇವತ್ತು ಇಷ್ಟು ಹೇಳುತ್ತೇನೆ, ಇಲಾಖೆಯಲ್ಲಿ ಪಾರದರ್ಶಕತೆ ತರಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ರಿಕ್ರೂಟ್‌ಮೆಂಟ್‌ನಲ್ಲಿ ಏನು ನಡೆದಿತ್ತು, ಮನಸ್ಸಿಗೆ ಬಂದ ಹಾಗೆ ರಿಕ್ರೂಟ್‌ಮೆಂಟ್ ಮಾಡುತ್ತಿದ್ದರು. ಮಂತ್ರಿಗಳು ಒಂದೆರಡು ಸೀಟು, ಎಮ್‌ಡಿಗೆ ಒಂದೆರಡು ಸೀಟು, ಮತ್ತೊಬ್ಬ

ಕೇಳಿದರೆ ಮತ್ತೊಬ್ಬನಿಗೆ ಎರಡು ಸೀಟು ಎಂದು ಹೀಗೆ ಕೊಡುತ್ತಿದ್ದರು. ನಾವು ಇವತ್ತು ಪಾರದರ್ಶಕತೆ ತಂದಿದ್ದೇವೆ. ಯಾವ ಪ್ರಕಾರ ಟೀಚರ್ಸ್ ರಿಕ್ರೂಟ್‌ಮೆಂಟ್ ಮಾಡುತ್ತಾರೆ, ಆ ಪ್ರಕಾರ ಮಾಡುತ್ತಿದ್ದೇವೆ. ಇನ್ನು ಮುಂದೆ ಅಪ್ರೂವಲ್ ಇಲ್ಲದೆ ಅಡ್ವರ್ಟೈಸ್‌ಮೆಂಟ್ ಮಾಡುವುದಕ್ಕಾಗುವುದಿಲ್ಲ. ಅಡ್ವರ್ಟೈಸ್‌ಮೆಂಟ್ ಮಾಡಿದ ನಂತರ recruitment by a written test ಮಾಡಬೇಕು. ರಿಟನ್ ಟೆಸ್ಟ್ ರೆಕಗ್ನೈಸ್ ಇಂಡಿಪೆಂಡೆಂಟ್ ಏಜೆನ್ಸಿಯಿಂದ ಮಾಡಿಸಬೇಕು. ಅಥವಾ ಆ ಪೋಸ್ಟ್‌ಗೆ ಏನು ಕ್ವಾಲಿಫಿಕೇಷನ್ ಇದೆ, that should be the basis. ಟೀಚರ್ ಸೆಲೆಕ್ಷನ್ ಹೇಗೆ ಮಾಡುತ್ತಾರೆ ಹಾಗೆ. ಮ್ಯಾನೇಜ್‌ಮೆಂಟ್‌ಗೆ ಹಿಂದೆ 100 ಮಾರ್ಕ್ಸ್ ಇರುತ್ತಿತ್ತು. We have reduced it to just 15 marks. ಏಕೆಂದರೆ ಇಲ್ಲಿ ಪಾರದರ್ಶಕತೆ ಬರಬೇಕು. ಗುಣಮಟ್ಟಕ್ಕೆ ಹೆಚ್ಚಿನ ಮಹತ್ವ ಸಿಗಬೇಕು. ಹಾಗಾಗಿ ಈ ಇಲಾಖೆಯಲ್ಲಿ ಎಲ್ಲರ ಸಹಕಾರದಿಂದ ಶಾಸಕರುಗಳ ಸಹಕಾರದಿಂದ, ನಿಮ್ಮೆಲ್ಲರ ಸಲಹೆ ಮುಖಾಂತರ ಒಂದು ಪಾರದರ್ಶಕತೆ ತರಲಿಕ್ಕೆ ಪ್ರಯತ್ನ ನಡೆಯುತ್ತಿದೆ. ನಾನು ಒಪ್ಪಿಕೊಳ್ಳುತ್ತೇನೆ, ಸಾಕಷ್ಟು ಸಮಸ್ಯೆಗಳು ಇವೆ ಒಳ್ಳೆಯ ಕೆಲಸ ಆಗಬೇಕು. ಸಮಸ್ಯೆ ಇದೆ. ಹಾಗಾಗಿ ನಾವು ಸಮಸ್ಯೆಯ ನಿವಾರಣೆ ಮಾಡಬೇಕಾಗಿದೆ. ಈ ಇಲಾಖೆ ಮುಖ್ಯವಾಗಿ ಸಕ್ಕರೆ ಕಾರ್ಖಾನೆ ಇರಬಹುದು, ಟೆಕ್ಸ್‌ಟೈಲ್ ಮಿಲ್ಸ್ ಇರಬಹುದು, ನಮ್ಮ ಆಯಿಲ್ ಮಿಲ್ಸ್‌ಗಳು ಇರಬಹುದು, ಇವತ್ತು ಸ್ವಲ್ಪ ಊರ್ಜಿತಾವಸ್ಥೆಗೆ ತಂದು ರೈತರಿಗೆ ಅನುವು ಆಗಲಿಕ್ಕೆ ನಾವು ಪ್ರಯತ್ನ ಮಾಡಬೇಕಾಗಿದೆ. ಆ ದೃಷ್ಟಿಯಿಂದ ಖಂಡಿತವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ರಾಮಸ್ವಾಮಿಯವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಏಕೆಂದರೆ, ಹಲವು ವಿಚಾರ ಅವರು ನನ್ನ ಗಮನಕ್ಕೆ ತಂದಿದ್ದಾರೆ. ಅದು ನನ್ನ ಗಮನಕ್ಕೆ ಬಂದಿರಲಿಲ್ಲ. ಇದರ ಬಗ್ಗೆ ನಾನು ಖಂಡಿತವಾಗಿ ಪ್ರತಿಯೊಂದು ತಾವು ಏನು ವಿಷಯ ರೈಸ್ ಮಾಡಿದ್ದೀರಿ, ಪ್ರತಿಯೊಂದು ವಿಷಯದ ಮೇಲೆ ನಾನು ವಿಚಾರಣೆ ಮಾಡಿಸಿ ನಿಮಗೆ ಬೇಕಾದರೆ ವರದಿ ಕಳುಹಿಸುತ್ತೇನೆ. ಅವಶ್ಯಕ ಬಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೇವೆ ಎಂಬುದನ್ನು ಸದನಕ್ಕೂ ತಿಳಿಸುತ್ತೇವೆ. ಇಲ್ಲಿ ಯಾರನ್ನೂ protect ಮಾಡುವ ಉದ್ದೇಶ ಅಥವಾ ಇಚ್ಛೆ ಮಾನ್ಯ ಧರ್ಮಸಿಂಗ್‌ರವರ ಸರ್ಕಾರಕ್ಕೆ ಇಲ್ಲ. ಪ್ರಾಮಾಣಿಕವಾಗಿ ನಿಷ್ಠೆಯಿಂದ ಒಳ್ಳೆಯ ಕೆಲಸಗಳನ್ನು ಯಾರು ಬೇಕಾದರೂ ಮಾಡಲಿ, ಅವರಿಗೆ ನಾನು ಬೆಂಬಲ ಕೊಡುತ್ತೇನೆ. ಎಲ್ಲಿಯಾದರೂ ದುರ್ವ್ಯವಹಾರ ನಡೆಯುತ್ತಿದ್ದರೆ, ಅವರ ವಿರುದ್ಧ ಸರ್ಕಾರ ಕ್ರಮ

ತೆಗೆದುಕೊಳ್ಳುತ್ತದೆ. ಅಂತಹವರಿಗೆ ಸರ್ಕಾರ protection ಕೊಡುವುದಿಲ್ಲ ಎನ್ನುವಂತಹ ಸ್ಪಷ್ಟವಾದ ಭರವಸೆಯನ್ನು ನಾನು ಸದನಕ್ಕೆ ಕೊಡುತ್ತಿದ್ದೇನೆ. ಶುಗರ್ ಫ್ಯಾಕ್ಟರೀಸ್ revive ಮಾಡಲಿಕ್ಕೆ ಒಂದು ಒಳ್ಳೆಯ ಅವಕಾಶ ಬಂದಿದೆ. ಬರುವ 4–5 ವರ್ಷ ಸಕ್ಕರೆ ಕಾರ್ಖಾನೆ revive ಮಾಡಲಿಕ್ಕೆ ಒಂದು ಒಳ್ಳೆಯ ಅವಕಾಶ ಇದೆ. ಇವತ್ತಿನ ನಮ್ಮ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಮುಖ್ಯವಾಗಿ ಅವರೇನು ಹೇಳಿದ್ದಾರೆ ಎಂದರೆ, 2002–03 ರಲ್ಲಿ ಯಾವ್ಯಾವ ಶುಗರ್ ಫ್ಯಾಕ್ಟರೀಸ್ crush ಮಾಡಿದ್ದಾರೋ, ಯಾರು ಹಾನಿಯಲ್ಲಿದ್ದಾರೋ, ಅವರಿಗೆ ಲೋನ್ಸ್ re-schedule .ಮಾಡಲಿಕ್ಕೆ ಅವರಿಗೆ ನಾವು ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಅದೇ ಪ್ರಕಾರ, ಶುಗರ್ ಡೆವಲಪ್‌ಮೆಂಟ್ ಫಂಡ್‌ನಿಂದ 4%ನಲ್ಲಿ ಸಾಲ ಕೊಡಲಿಕ್ಕೂ ಕೂಡ ಒಪ್ಪಿಕೊಂಡಿದ್ದಾರೆ. ಆ ತರಹದ ಪ್ರಪೋಸಲ್‌ವೊಂದನ್ನೂ ಸಹ ನಾವು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಮತ್ತು NCDC ಗೆ, ನಮ್ಮ ಹಣಕಾಸಿನ ಇಲಾಖೆಯ ಸಹಕಾರದಿಂದ ಮಾಡಿ, ಎಲ್ಲೆಲ್ಲಿ ಸಕ್ಕರೆ ಕಾರ್ಖಾನೆಗಳನ್ನು revive ಮಾಡಲಿಕ್ಕೆ ಸಾಧ್ಯ ಇದೆಯೋ, ಅಲ್ಲಿ ಮಾಡುತ್ತೇವೆ. ಖಾನಾಪುರ ಶುಗರ್ ಫ್ಯಾಕ್ಟರಿ ಆಗಬೇಕಾದರೆ ನಾವೆಲ್ಲಾ ದುಡಿದಿದ್ದೇವೆ. ಅದು ಏನಾಯಿತು? ಎರಡು ವರ್ಷಗಳಿಂದ ಆ ಸಕ್ಕರೆ ಕಾರ್ಖಾನೆ sick ಆಗಿದೆ. ಒಳ್ಳೆಯ ಶುಗರ್ ಕೇನ್ ಏರಿಯಾ, ಒಳ್ಳೆಯ ಕ್ವಾಲಿಟಿ, ಒಳ್ಳೆಯ ಸುಕ್ರೋಸ್, 11% ನಷ್ಟು ಒಳ್ಳೆಯ recovery ಇತ್ತು. ಆದರೆ ಆ ಕಾರ್ಖಾನೆ ಮುಚ್ಚಿ ಹೋಯಿತು. ಹಲವಾರು ಸಮಸ್ಯೆಗಳಿಂದ ಹೀಗೆ ಆಗಿದೆ. ಮಲಪ್ರಭಾ ಕೂಡ ಒಳ್ಳೆಯ ಕಾರ್ಖಾನೆ. ಅದೇ ರೀತಿ ಭಾಗ್ಯಲಕ್ಷ್ಮಿ ಕೂಡ ಇದೆ. ಮಾನ್ಯ Deputy CM ರವರು ಮಂಡ್ಯದ ಮೈಶುಗರ್ ಕಂಪೆನಿಯನ್ನು revive ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದಾರೆ. ಹೀಗೆ ಎಲ್ಲೆಲ್ಲಿ ಸಕ್ಕರೆ ಕಾರ್ಖಾನೆಗಳನ್ನು revive ಮಾಡಲಿಕ್ಕೆ ಸಾಧ್ಯವೋ,ಎಲ್ಲೆಲ್ಲಿ ಒಳ್ಳೆಯ ಮ್ಯಾನೇಜ್‌ಮೆಂಟ್ ಇವೆಯೋ, ಅಲ್ಲಿ ಖಂಡಿತವಾಗಿ ಸರ್ಕಾರ ಬೆಂಬಲ ಕೊಡುತ್ತದೆ. ಏಕೆಂದರೆ ಇವೆಲ್ಲಾ ರೈತರ ಸಂಸ್ಥೆಗಳು ಎಂದು ಹೇಳಿ ನಾನು ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. NCDC ಗೆ ಹೇಗೆ ಪ್ರಪೋಸಲ್ ಅನ್ನು violate .ಮಾಡಿ .co-operation .ಇಲಾಖೆಯವರು ಕಳುಹಿಸಿದರು?..Finance

Department ಗೂ ಬರಲಿಲ್ಲ, ಕ್ಯಾಬಿನೆಟ್‌ಗೂ ಬರಲಿಲ್ಲ. ಅದರ ಬಗ್ಗೆ ಮಾಹಿತಿ ನಿಮಗೂ ಗೊತ್ತಿದೆ. ಇದರ ಬಗ್ಗೆ ತಾವು ಹೇಳಲಿಲ್ಲ. ಮತ್ತೆ re-vitalisation of sugar industries committee ಏನು ಬಂದಿತ್ತೊ, ಅದಕ್ಕೆ official ಆಗಿ ಇವರು ಹೇಗೆ ಹೇಳಿದರು. ಮೊಲಾಸಿಸ್‌ನಲ್ಲಿ 300% less 4,500 ರೂಪಾಯಿಗಳು ಇದ್ದರೆ, 1,200 ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ಇದರ ಬಗ್ಗೆ ನೀವು ಉನ್ನತ ಮಟ್ಟದ ತನಿಖೆ ಮಾಡಿಸುತ್ತೀರಾ? ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಈಗ Spare parts purchase ನಲ್ಲಿ ಮಾಡಲೇ ಇಲ್ಲ ಬಿಡಿ...

ಶ್ರೀ ಆರ್.ವಿ. ದೇಶಪಾಂಡೆ : ಅದು ಒಂದು ವರ್ಷದ ಹಿಂದೆ, ತಾವು ಹೇಳಿದಿರಿ, ಆ re-vitalisation committee ಬಂದಾಗ, Director of Sugar ಅವರು, sugar ಕಾರ್ಖಾನೆಗಳಿಂದ ಹಣ collect ಮಾಡಿ ಆಗ ಮಹಾರಾಜ ಸೂಟ್ ರೂಂಗೆ ಕೊಟ್ಟಿದ್ದರು. ಅದರ ನಂತರ ನೇರವಾಗಿ NCDC ಗೆ proposal ಕೊಟ್ಟು, ಅದರಲ್ಲಿ ಹಣದ ದುರುಪಯೋಗ ಆಗಿದೆ, ಮುಂತಾದ ಹಲವಾರು ವಿಚಾರಗಳನ್ನು ಹೇಳಿದಿರಿ. ನಾನು ಒಬ್ಬ senior ಅಧಿಕಾರಿ ಕಡೆಯಿಂದ, ತಕ್ಷಣ ನಾಳೆಯೇ ಇದರ ಬಗ್ಗೆ order ಮಾಡಿ, ಅದರ ಬಗ್ಗೆ ತನಿಖೆ ಮಾಡಿಸುತ್ತೇನೆ. ಆ ತನಿಖೆಯಲ್ಲಿ ಏನು ಬರುತ್ತದೋ,ಅದರ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ದೊಡ್ಡವರಿರಲಿ, ಸಣ್ಣವರಿರಲಿ, ಹಿರಿಯ ಅಧಿಕಾರಿಯಾಗಿರಲಿ ಅಥವಾ ಮತ್ತೊಬ್ಬರು ಇರಲಿ, ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ನಿಮಗೆ ನಾನು ಭರವಸೆಯನ್ನು ಕೊಡುತ್ತಿದ್ದೇನೆ.

(ಆ) ವಿಷಯ: ಆಂಧ್ರ ಪ್ರದೇಶದವರು ಕಾನೂನು ಬಾಹಿರವಾಗಿ ಕೈಗೊಂಡಿರುವ ನೀರಾವರಿ ಸ್ಕೀಂಗಳ ಬಗ್ಗೆ

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ತಾವು ಕೊನೆಗೆ ಈಗ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳು. ತಾವೂ ಕೂಡ ಉಪಾಧ್ಯಕ್ಷರಾಗಿ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೀರಿ. ನಾವು ಸಹಕಾರ ಹೇಗೆ ಕೊಡುತ್ತೇವೆಯೋ ಹಾಗೆಯೇ ಸದನ ನಡೆಯುತ್ತದೆ. ಆದುದರಿಂದ ನಾನು ಮಧ್ಯದಲ್ಲಿ ಎದ್ದುನಿಂತ ಉದ್ದೇಶ ಸಾಧ್ಯವಾದರೆ ಸಭಾನಾಯಕರು ಒಪ್ಪಿದರೆ, ಈ ಆಂಧ್ರದವರು ಯಾವ ರೀತಿ ನಮ್ಮನ್ನು ದುರುಪಯೋಗ ಮಾಡಿಕೊಂಡು ಕಾನೂನು ಬಾಹಿರವಾಗಿ ಪ್ರಾಜೆಕ್ಟ್‌ಗಳನ್ನು ಕೃಷ್ಣಾ ಬೇಸಿನ್‌ನಲ್ಲಿ ಅವರು